ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕನ್ನಡದ ಖ್ಯಾತ ಹಾಸ್ಯ ಕಲಾವಿದ ಚಿಕ್ಕಣ್ಣ ಅವರು ಪಾವನಾ ಜೊತೆ ಮೈಸೂರಿನ ಸ್ಪೆಕ್ಟ್ರಮ್ ಹಾಲ್‌ನಲ್ಲಿ ಭಾನುವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

31 ಆಗಸ್ಟ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -169 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ನವಿಲಿನ ಗರಿಗಳ ನಡುವೆ ಅರಳಿದ 800 ವರ್ಷದ ಇತಿಹಾಸ ವಿಟ್ಟಲದ ನವಿಲು ಬಸದಿ » 2



ನೇಪಾಳ ಪ್ರವಾಹ : ಮೃತರ ಸಂಖ್ಯೆ 750ಕ್ಕೆ ಏರಿಕೆ » 3



ಹಾಸನ ಮೂಲದ ಮಹಿಳೆ ಶ್ಲಾಘಿಸಿದ ಪ್ರಧಾನಿ ಮೋದಿ » 4

# ದೇಶವೇ ಬೆಚ್ಚಿಬೀಳುವ ಮಾಹಿತಿ ಬಹಿರಂಗಪಡಿಸುವೆ

## ರಾಜ್ಯ ಸರ್ಕಾರದ ವಿರುದ್ಧ ಹೆಚ್.ಡಿ.ಕೆ. ಬಾಂಬ್ | ಕೆಪಿಎಸ್‌ಸಿ ಕರ್ಮಕಾಂಡ ಬಯಲು

• ಪ್ರಜೋದಯ ವರದಿ

**ಬೆಂಗಳೂರು:** ಕೆಪಿಎಸ್‌ಸಿ ಹಗರಣ ಕುರಿತು ರಾಜ್ಯ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿರುವ ಕೇಂದ್ರ ಸಚಿವ ಹೆಚ್. ಡಿ. ಕುಮಾರ ಸ್ವಾಮಿ ಅವರು ಮುಂದಿನ 12 ದಿನಗಳಲ್ಲಿ ದೇಶವೇ ಅಲ್ಲೋಲ ಕಲ್ಲೋಲವಾಗುವ ಮಾಹಿತಿ ಬಿಚ್ಚಿಡುತ್ತೇನೆಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ರಾಜ್ಯದ ಜನರು ತೀವ್ರ ಸಂಕಷ್ಟದಲ್ಲಿದ್ದಾರೆ. ಈ ಸರ್ಕಾರದ ಯಾವ ಯೋಜನೆಗಳು ಜನರಿಗೆ ತಲುಪುತ್ತಿಲ್ಲ. ಇಂತಹ ಸಂದರ್ಭದಲ್ಲಿ ನಾನು ಜನರೊಂದಿಗೆ ಇರಬೇಕು. ಆದರೆ ಅಮೇರಿಕಾದಲ್ಲಿ ನಡೆಯುತ್ತಿರುವ ಅಕ್ಕ ಸಮ್ಮೇಳನಕ್ಕೆ ಹೋಗಲೇಬೇಕಾಗಿರುವುದರಿಂದ ಸೆ.12ರಂದು ವಾಪಾಸ್ ಬಂದು ಮಾಹಿತಿಯನ್ನು ಜನರ ಮುಂದಿಡುತ್ತೇನೆಂದರು.

ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಅವರು ದೆಹಲಿಗೆ ಹೋಗಲು ಅನುಮತಿ ನೀಡಿದ್ದು ಯಾರು. ಅಲ್ಲಿ ಏನೋ ಅನಾಹುತ ಆಯ್ತೆಂದು ಅವರನ್ನು ಸ್ನೇಹಿತರು ಇನ್ಯಾವುದೋ



> ನಾನು ಮುಖ್ಯಮಂತ್ರಿ ಆಗಿದ್ದಾಗ 2006ರಲ್ಲಿ ದಲಿತ ಸಮಾಜದವರೊಬ್ಬರನ್ನು ಕೆಪಿಎಸ್‌ಸಿ ಅಧ್ಯಕ್ಷರನ್ನಾಗಿ ಮಾಡಿದೆ. ನನ್ನ ಸಂಬಂಧಿಕರಿಗಾಗಲಿ, ಆಪ್ತರನ್ನಾಗಲಿ ಪರಿಗಣಿಸಿಲ್ಲ. ಈಗ ಅಧ್ಯಕ್ಷರಾಗಿದ್ದವರನ್ನುಯಾರು ನೇಮಕ ಮಾಡಿದ್ದರು ಎಂಬುದನ್ನು ತಿಳಿದುಕೊಳ್ಳಲಿ. ದಾವಣಗೆರೆಯಲ್ಲಿ ಯಾವ ಶಾಸಕರ ಮನೆಯಲ್ಲಿ ಅವರು ಇದ್ದರೆಂಬುದು ನಾಡಿಗೆ ಗೊತ್ತಿದೆ.
>
> **-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ರಾಜ್ಯಕ್ಕೆ ಕರೆದುಕೊಂಡು ಹೋದರು. ಬೆಂಗಳೂರಿನಲ್ಲಿ ಇಡಿ ಅಧಿಕಾರಿಗಳು ಅವರ ನಿವಾಸದ ಮೇಲೆ ದಾಳಿ ಮಾಡಿದ್ದರಿಂದ ಕರೆಸಿಕೊಳ್ಳಲಾಯಿತು. ದೇವನಹಳ್ಳಿ ರೆಸಾರ್ಟ್‌ನಲ್ಲಿ ಮೂರು ದಿನ ಇರಿಸಿದ್ದು ಏಕೆ, ಅವರ ಜೊತೆ ಯಾರ್ಯಾರು ಇದ್ದರೆಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪ್ರಶ್ನಿಸಿದರು.

**ಕೆಪಿಎಸ್‌ಸಿ ಬಗ್ಗೆ ಅಸಹ್ಯ ಭಾವನೆ**

ಕೆಪಿಎಸ್‌ಸಿ ಬಗ್ಗೆ ಸಾರ್ವಜನಿಕರಲ್ಲಿ ಅಸಹ್ಯಕರ ಭಾವನೆ ಮೂಡಿದೆ, ಈ ಸಂಸ್ಥೆ ಬೇಕಾ ಎಂದು ಜನ ಕೇಳುತ್ತಿದ್ದಾರೆ. ಸಂಪೂರ್ಣ ಅಧಿಕಾರ ಸಿಕ್ಕರೆ ಕೆಪಿಎಸ್‌ಸಿ ರದ್ದು ಮಾಡುತ್ತೇನೆಂದು ಪ್ರಿಯಾಂಕ್ ಖರ್ಗೆ ಹೇಳಿದ್ದರು. ಈಗ ಅಧಿಕಾರ ಸಿಕ್ಕಿದೆಯಲ್ಲ ಮಾಡಿ, ಗೃಹ ಸಚಿವರಾಗಿ ನೀವೇನು ಮಾಡಿದ್ದೀರಿ ಹೇಳಿ. ವಿದ್ಯಾರ್ಥಿಗಳ ಬದುಕಿನಲ್ಲಿ ಕೆಪಿಎಸ್‌ಸಿ ಚೆಲ್ಲಾಟ ಆಡುತ್ತಿದೆ. ಅದರ ವಿರುದ್ಧ ದನಿ ಎತ್ತಲು ನಾವು ಸದಾ ಸಿದ್ಧ. » **ನಾಲ್ಕನೇ ಪುಟದಲ್ಲಿ**

### ಕುಮಾರಸ್ವಾಮಿ ಪಲಾಯನವಾದಿ: ಪ್ರಿಯಾಂಕ್ ಖರ್ಗೆ

ಕುಮಾರಣ್ಣನವರೇ, ತಾವೊಬ್ಬ ಕೇಂದ್ರ ಸಚಿವರು, ತೂಕವಿಲ್ಲದ ಮಾತುಗಳನ್ನಾಡಿ ತೂಕ ಕಳೆದುಕೊಳ್ಳಬೇಡಿ. ಕೆಪಿಎಸ್‌ಸಿ ವಿಷಯವಾಗಿ ತಮ್ಮ ವಿರುದ್ಧದ ಆರೋಪಗಳಿಗೆ ತಾರ್ಕಿಕ ಉತ್ತರಗಳನ್ನು ನೀಡುವ ಬದಲಾಗಿ ಪಲಾಯನದ ಪತ್ರಿಕಾಗೋಷ್ಠಿ ನಡೆಸಿದ್ದೀರಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರೋಪಿಸಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ ಅವರ ಆರೋಪಗಳಿಗೆ ಕುರಿತು, 2011ರ ಗೆಜೆಟೆಡ್ ಪ್ರೊಬೆಷನರಿ ನೇಮಕ ಪ್ರಕ್ರಿಯೆಗೆ ಸಂಬಂಧಿಸಿ ಮಾಡಲಾಗಿದ್ದ ಶಿಫಾರಸುಗಳ ಕುರಿತು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಆಯ್ಕೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂದು ಹೈಕೋರ್ಟ್ ಹಾಗು ಸುಪ್ರೀಂ ಕೋರ್ಟ್ ನೇಮಕ ಪ್ರಕ್ರಿಯೆ ರದ್ದುಗೊಳಿಸಿ ತೀರ್ಪು ನೀಡಿದ್ದರೂ, ರಾಜ್ಯ ಸರ್ಕಾರದ ಮೇಲ್ಮನವಿಯನ್ನು ವಜಾಗೊಳಿಸಿದ್ದರೂ ದೇವೇಗೌಡರು ಹಾಗು ಕುಮಾರಸ್ವಾಮಿ ಆ ಅಭ್ಯರ್ಥಿಗಳನ್ನು ನೇಮಕ ಮಾಡುವಂತೆ ಅಂದಿನ ಮುಖ್ಯಮಂತ್ರಿಗೆ ಶಿಫಾರಸ್ಸು ಪತ್ರ ನೀಡಿದ್ದರೆಂದು ಆರೋಪಿಸಿದ್ದಾರೆ.

ಕುಮಾರಸ್ವಾಮಿ ಮಾಡಿದರೆ ಮೃಷ್ಟಾನ್ನ, ಬೇರೆಯವರು ಮಾಡಿದರೆ ಚಿತ್ರಾನ್ನವೇ. ತಮ್ಮ ಸಂಬಂಧಿಕ ಅಧಿಕಾರಿಗಳ ನೇಮಕ ಪ್ರಕ್ರಿಯೆ ರದ್ದುಪಡಿಸಿದ್ದರೂ ಸಿಎಟಿಯಿಂದ ತಡೆಯಾಜ್ಞೆ ತಂದು ಐಎಎಸ್‌ಗೆ ಬಡ್ತಿ ಕೊಡಿಸಿ ಮುಂದುವರೆಸಿರುವುದು ಯಾರ ಚಿತಾವಣೆಯಿಂದ ಎಂಬುದು ಎಲ್ಲರಿಗೂ ತಿಳಿದಿದೆ. ಇದರ ಬಗ್ಗೆ ತಾವು ಮಾತನಾಡುವುದಿಲ್ಲವೇಕೆ ಎಂದು ಕೇಳಿದ್ದಾರೆ.

# ಮನೆಗೆ ಬರಲಿದ್ದಾರೆ ಗ್ಯಾರಂಟಿ ಸಮಿತಿ ಸದಸ್ಯರು

• ಪ್ರಜೋದಯ ವರದಿ



**ಬೆಂಗಳೂರು:** ಗೃಹಲಕ್ಷ್ಮಿ ಯೋಜನೆಯ ಮರು ಪರಿಶೀಲನೆ ಆರಂಭವಾಗಿದ್ದು, ಫಲಾನು ಭವಿಗಳ ಮನೆ ಬಾಗಿಲಿಗೆ ಗ್ಯಾರಂಟಿ ಸಮಿತಿ ಸದಸ್ಯರು ಭೇಟಿ ನೀಡಿದಾಗ ಅಗತ್ಯ ದಾಖಲೆಗಳನ್ನು ನೀಡಿ ಸಹಕರಿಸಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಗೃಹಲಕ್ಷ್ಮಿ ಯೋಜನೆ ಜಾರಿಯಾಗಿ 3 ವರ್ಷ ಪೂರ್ಣಗೊಂಡ ಹಿನ್ನಲೆ ವಿಡಿಯೋ ಮೂಲಕ ಎಲ್ಲಾ ಫಲಾನುಭವಿಗಳಿಗೂ ಶುಭಾಶಯ ಕೋರಿ ಒಂದು ತಿಂಗಳ ಕಾಲ ನಡೆಯುವ ಮರು ಪರಿಶೀಲನೆ ಬಗ್ಗೆ ಮಹತ್ವದ ಮಾಹಿತಿ ಹಂಚಿಕೊಂಡಿದ್ದಾರೆ.

ಗ್ಯಾರಂಟಿ ಸಮಿತಿ ಸದಸ್ಯರು ನಿಮ್ಮ ಮನೆ ಬಾಗಿಲಿಗೆ ಬರುತ್ತಾರೆ. ತಪ್ಪದೇ ಅಗತ್ಯ ಮಾಹಿತಿ ಒದಗಿಸಬೇಕು. ಅರ್ಜಿ ನಮೂನೆ ತುಂಬಿ ಕೊಡಬೇಕು. ನಿಮ್ಮ ಹೊಸ ಭಾವಚಿತ್ರ, ಮೊಬೈಲ್ ಸಂಖ್ಯೆ ನೀಡಬೇಕು. ಈ ಮೂಲಕ ಸರ್ಕಾರಕ್ಕೆ ಸಹಕಾರಿಯಾಗಿ ಯೋಜನೆ ನಿಮ್ಮ ಕೈತಪ್ಪದಂತೆ ನೋಡಿಕೊಳ್ಳಿ ಎಂದು ತಿಳಿಸಿದರು.

**1.2 ಕೋಟಿಗೂ ಅಧಿಕ ಫಲಾನುವಿಗಳು:** ನಾಡಿನ ಮನೆಯೊಡತಿಯರ ಬದುಕಿಗೆ ಆರ್ಥಿಕ ಬಲ ತುಂಬಿದ ಗೃಹಲಕ್ಷ್ಮಿ ಯೋಜನೆಗೆ 3 ಮೂರು ವರ್ಷಗಳ ಸಾರ್ಥಕ ಸಂಭ್ರಮ. ಮಹಿಳಾ ಸಬಲೀಕರಣವನ್ನು ನಿಜವಾದ ಅರ್ಥದಲ್ಲಿ ಸಾಕಾರಗೊಳಿಸಿದ ಈ ಮಹತ್ವಾಕಾಂಕ್ಷಿ ಯೋಜನೆ, ಕಳೆದ 3 ವರ್ಷಗಳಲ್ಲಿ 1.2 ಕೋಟಿಗೂ ಅಧಿಕ ತಾಯಂದಿರ ಬದುಕಿನಲ್ಲಿ ಆಶಾಕಿರಣವಾಗಿದೆ. ಇದುವರೆಗೆ ಬರೋಬ್ಬರಿ 76,500+ ಕೋ. ರೂ. ಆರ್ಥಿಕ ನೆರವನ್ನು ನೇರವಾಗಿ ಮನೆಯೊಡತಿಯರ ಖಾತೆಗೆ ವರ್ಗಾಯಿಸುವ ಮೂಲಕ ಹೆಣ್ಣುಮಕ್ಕಳ ಸ್ವಾಭಿಮಾನದ ಬದುಕಿಗೆ ನಮ್ಮ ಸರ್ಕಾರ ಆಸರೆಯಾಗಿದೆ ಎಂದು ತಿಳಿಸಿದರು.

### ಸಲ್ಲಿಸಬೇಕಾದ ದಾಖಲೆ

ಗಣತಿದಾರರಿಂದ ಪಡೆದು ಭರ್ತಿ ಮಾಡಿದ ಅರ್ಜಿ ನಮೂನೆ, ಇತ್ತೀಚಿನ ಫೋಟೋ ಮತ್ತು ಆಧಾರ್ ಪ್ರತಿ, ಎಪಿಎಲ್ ಅಥವಾ ಬಿಪಿಎಲ್ ರೇಷನ್ ಕಾರ್ಡ್, ಹಣ ಜಮೆಯಾಗುವ ಬ್ಯಾಂಕ್ ಖಾತೆ ವಿವರ, ಮತದಾರರ ಗುರುತಿನ ಚೀಟಿ, ಮೊಬೈಲ್ ಸಂಖ್ಯೆ, ಫಲಾನುಭವಿಗಳು ಮೃತಪಟ್ಟಿದ್ದರೆ, ವಲಸೆ ಹೋಗಿದ್ದರೆ, ಸ್ಥಳಾಂತರಗೊಂಡಿದ್ದರೆ ಗಣತಿದಾರರಿಗೆ ವಿವರ ನೀಡಬೇಕು. ವಾಸಿಸುತ್ತಿರುವ ಮನೆ ಮ್ಯಾಪಿಂಗ್, ಬಯೋಮೆಟ್ರಿಕ್ (ಗಣತಿದಾರರು ಸ್ಥಳದಲ್ಲಿಯೇ ಮೊಬೈಲ್ ಆ್ಯಪ್ ಮೂಲಕ ಪಡೆಯಲಿದ್ದಾರೆ) ನೀಡಬೇಕು.

# ಆಧುನಿಕ ಜೀವನ ಶೈಲಿಯಿಂದ ಸೋಮಾರಿತನ

• ಪ್ರಜೋದಯ ವರದಿ

**ಅರಸೀಕೆರೆ:** ಆಧುನಿಕ ಜೀವನ ಶೈಲಿ ಮನುಷ್ಯನನ್ನು ಸೋಮಾರಿಯನ್ನಾಗಿ ಮಾಡುತ್ತಿದ್ದು ನೆಮ್ಮದಿಯ ಜೀವನ ಕಟ್ಟಿಕೊಳ್ಳಬೇಕೆಂದರೆ ನಿತ್ಯ ವ್ಯಾಯಾಮ ಮಾಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಲಯನ್ಸ್ ಸಂಸ್ಥೆಯಿಂದ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಸಿಂಹ ನಡಿಗೆ 2026 ವಾಕಥಾನ್‌ಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಒಂದಲ್ಲ ಒಂದು ರೀತಿಯಲ್ಲಿ ಮನುಷ್ಯನನ್ನು ಆರೋಗ್ಯ ಸಮಸ್ಯೆ ಕಾಡುತ್ತಿದೆ. ಆರೋಗ್ಯವಂತರಾಗಿ ನೆಮ್ಮದಿಯ ಜೀವನ ನಡೆಸಬೇಕಾದರೆ ಪ್ರತಿಯೊಬ್ಬರು ತಮ್ಮ ದಿನಚರಿಯ ಒಂದೆರಡು ಗಂಟೆಯನ್ನು ನಡಿಗೆ, ವ್ಯಾಯಾಮ ಅಥವಾ ಆಟೋಟಗಳಲ್ಲಿ ತೊಡಗಿಸಿ ಕೊಳ್ಳಬೇಕೆಂದರು.

ಆರೋಗ್ಯವಂತ ಸಮಾಜದಿಂದ ಮಾತ್ರ ಸದೃಢ ದೇಶ ನಿರ್ಮಾಣ ಸಾಧ್ಯ. ಸಮಾಜವನ್ನು ಜಾಗೃತಿಗೊಳಿ



ಸುವ ನಿಟ್ಟಿನಲ್ಲಿ ಲಯನ್ಸ್ ಸಂಸ್ಥೆ ಹಮ್ಮಿಕೊಂಡಿರುವ ಸಿಂಹ ನಡಿಗೆ ಔಚಿತ್ಯ ಕಾರ್ಯಕ್ರಮವಾಗಿದೆ. ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಆಯೋಜಿಸಬೇಕು. ಅದಕ್ಕೆ ವೈಯಕ್ತಿಕ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ತಹಶೀಲ್ದಾರ್‌ಸಂತೋಷ್ ಕುಮಾರ್ ಅವರು ಮಾತನಾಡಿ, ಆರೋಗ್ಯ, ಪರಿಸರ ಮಹತ್ವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಲಯನ್ಸ್ ಸಂಸ್ಥೆ ಆಯೋಜಿಸಿರುವ ಜಾಗೃತಿ ಜಾಥಾ ಹೆಮ್ಮೆಯ ಕೆಲಸ. ಇದೇ ರೀತಿ ಎಲ್ಲಾ ಸಂಘಟನೆಗಳು ಕಾರ್ಯಕ್ರಮ ಆಯೋಜಿಸಬೇಕೆಂದು ಸಲಹೆ ನೀಡಿದರು.

**ವಿದ್ಯಾರ್ಥಿಗಳ ಅತ್ಯುತ್ಸಾಹ**

ವಿದ್ಯಾರ್ಥಿಗಳು, ಮಹಿಳೆಯರು ಅತ್ಯುತ್ಸಾಹದಿಂದ ಜಾಥಾದಲ್ಲಿ ಭಾಗಿಯಾದರು. ಶ್ವೇತ ವರ್ಣದ ಸಮವಸ್ತ್ರದೊಂದಿಗೆ ನೂರಾರು ಸಂಖ್ಯೆಯಲ್ಲಿ ಜೂನಿಯರ್ ಕಾಲೇಜ್ ಮುಂಭಾಗ ಸೇರಿದ ನಗರದ ಜನರು ಟಿಹೆಚ್ ರಸ್ತೆಯಿಂದ ತಾಲ್ಲೂಕು ಕಚೇರಿ ವರೆಗೆ ಕಾಲ್ನಡಿಗೆಯಲ್ಲಿ ಬಂದು ಕಾರ್ಯಕ್ರಮ ಸಂಪನ್ನಗೊಳಿಸಿದರು.

ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೆಜ್ಜೆ ಹಾಕಿದರು. ನಗರಸಭೆ ಮಾಜಿ ಅಧ್ಯಕ್ಷ ಎಂ. ಸಮೀವುಲ್ಲಾ, ಮಾಜಿ ಸದಸ್ಯ ದರ್ಶನ್, ಲಯನ್ಸ್ ಸಂಸ್ಥೆ ಪದಾಧಿಕಾರಿಗಳಾದ ಮಂಜಣ್ಣ, ವೆಂಕಟೇಶ್, ಸತೀಶ್, ಪರಮೇಶ್, ಶಿವಕುಮಾರ್, ಅಂತಾರಾಷ್ಟ್ರೀಯ ಮ್ಯಾರಥಾನ್ ಕ್ರೀಡಾಪಟು ಗುರು ಪ್ರಸಾದ್ ಮೊದಲಾದವರಿದ್ದರು.

## ಏಳು ತಿಂಗಳಲ್ಲಿ 525 ಪ್ರಕರಣ | ಅತ್ಯಾಚಾರ ಪ್ರಕರಣಗಳೂ 57ಕ್ಕೆ ಹೆಚ್ಚಳ

# ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಭಾರೀ ಏರಿಕೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಕಾನೂನು ಎಷ್ಟೇ ಬಿಗಿಯಾದರೂ, ಅರಿವು ಕಾರ್ಯಕ್ರಮಗಳು ನಡೆದರೂ ಜಿಲ್ಲೆಯಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹೆಚ್ಚುತ್ತಲೇ ಇದೆ ಎನ್ನುವುದು ಸರ್ಕಾರದ ವರದಿಯಿಂದ ಬಹಿರಂಗವಾಗಿದೆ.

2023ರ ಏಪ್ರಿಲ್‌ನಿಂದ ಡಿಸೆಂಬರ್ ವರೆಗೆ 128 ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿ 157 ಪ್ರಕರಣಗಳು ದಾಖಲಾಗಿದ್ದವು. 2026ರ ಜನವರಿಯಿಂದ ಜುಲೈ ಅಂತ್ಯದವರೆಗೆ ಬರೋಬ್ಬರಿ 525 ಪ್ರಕರಣಗಳು ದಾಖಲಾಗಿವೆ.

ವಿಧಾನಸಭೆ ಅಧಿವೇಶನದಲ್ಲಿ ಅರಕಲಗೂಡು ಶಾಸಕ ಎ.ಮಂಜು ಅವರು ಕೇಳಿದ ಪ್ರಶ್ನೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನೀಡಿದ ಉತ್ತರದಲ್ಲಿ ಈ ಅಂಕಿ-ಅಂಶಗಳು ಬಹಿರಂಗವಾಗಿವೆ. 2025ರಲ್ಲಿ ಈ ಸಂಖ್ಯೆ 135ಕ್ಕೆ ಇಳಿಕೆಯಾಗಿತ್ತು. ಆದರೆ 2026ರ ಮೊದಲ ಏಳು ತಿಂಗಳಲ್ಲೇ 525 ಪ್ರಕರಣಗಳು ದಾಖಲಾಗಿರುವುದು ಆತಂಕಕ್ಕೆ ಕಾರಣವಾಗಿದೆ.



ಇದೇ ಅವಧಿಯಲ್ಲಿ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲೂ ಏರಿಕೆ ಕಂಡುಬಂದಿದೆ. 2024ರಲ್ಲಿ 18 ಹಾಗು 2025ರಲ್ಲಿ 19 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, 2026ರ ಜುಲೈ ಅಂತ್ಯದ ವೇಳೆಗೆ 57 ಪ್ರಕರಣಗಳು ದಾಖಲಾಗಿವೆ. 2023ರ ಏಪ್ರಿಲ್ 1ರಿಂದ 2026ರ ಜುಲೈ 31ರ ವರೆಗೆ ಜಿಲ್ಲೆಯಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಒಟ್ಟು 945 ಪ್ರಕರಣಗಳು ದಾಖಲಾಗಿವೆ.

**ಪ್ರತಿ ಠಾಣೆಯಲ್ಲೂ ಇದೇ ರಗಳೆ**

ಜಿಲ್ಲೆಯ ಪ್ರತಿ ಪೊಲೀಸ್ ಠಾಣೆಯಲ್ಲೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹಾಗು ಅತ್ಯಾಚಾರದ ಪ್ರಕರಣಗಳೇ ಹೆಚ್ಚು ಸದ್ದು ಮಾಡುತ್ತಿವೆ. ಠಾಣಾಧಿಕಾರಿಗಳು ಈ ಸಂಬಂಧ ಭಾರೀ ಆತಂಕ ವ್ಯಕ್ತಪಡಿ ಸುತ್ತಿದ್ದಾರೆ. ನ್ಯಾಯಾಲಯಕ್ಕೆ ಹಾಜರುಪಡಿಸುವ ಬಹುತೇಕ ವಿಚಾರಣಾಧೀನ ಖೈದಿಗಳಲ್ಲಿ ಪೋಕ್ಸೋ ಆರೋಪಿಗಳೇ ಇರುತಾರೆಂಬುದು ಆತಂಕದ ಸಂಗತಿ. » **ನಾಲ್ಕನೇ ಪುಟದಲ್ಲಿ**

### ಬ್ಲ್ಯಾಕ್‌ಮೇಲ್‌ಗೆ ಪೋಕ್ಸೋ ಅಸ್ತ್ರ

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಗೆ ಇರುವ ಪೋಕ್ಸೋ ಅಸ್ತ್ರವನ್ನು ಬ್ಲ್ಯಾಕ್ ಮೇಲ್ ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪವು ಕೇಳಿಬಂದಿದೆ. ಯಾರಾ ದರೂ ಆರ್ಥಿಕವಾಗಿ ಬಲಾಢ್ಯರಾಗಿರುವ ವ್ಯಕ್ತಿ ಕಂಡುಬಂದರೆ ಅವರ ವಿರುದ್ಧ ಪೋಕ್ಸೋ ಕೇಸ್ ದಾಖಲಿಸುವ ಭಯವೊಡ್ಡುತ್ತಾರೆ. ಅವರು ಹೇಳಿದಷ್ಟು ಹಣ ನೀಡಲು ನಿರಾಕರಿಸಿದರೆ ಹೆಣ್ಣು ಮಕ್ಕಳಿಂದ ಠಾಣೆಗಳಲ್ಲಿ ಪ್ರಕರಣ ದಾಖಲಿಸುತ್ತಾರೆ. ಈ ಕಾರಣಗಳಿಂದಲೂ ಕಾನೂನು ದುರ್ಬಳಕೆ ಆಗುತ್ತಿದೆ ಎನ್ನಲಾಗಿದೆ.

# ಕಾರಾಗೃಹ ಸಿಬ್ಬಂದಿ ಮೇಲೆ ಹಲ್ಲೆ ಪ್ರಕರಣಕ್ಕೆ ತಿರುವು

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರಾಗೃಹದಲ್ಲಿ ಆ.28ರ ಶುಕ್ರವಾರ ವಿಚಾರಣಾಧೀನ ಖೈದಿಗಳ ನಡುವೆ ನಡೆದ ಗಲಾಟೆ ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದೆ.

ಡಿಎಸ್‌ಬಿಯಿಂದ ಮಾಧ್ಯಮಗಳಿಗೆ ಕಳುಹಿಸಿದ್ದ ಮಾಹಿತಿಯಲ್ಲಿ ವಿಚಾರಣಾಧೀನ ಖೈದಿಗಳಾದ ಮೋಹನ ಕುಮಾರ್ ಹಾಗು ರಂಗಸ್ವಾಮಿ ದೂರವಾಣಿ ಕರೆ ವಿಚಾರವಾಗಿ ಹೊಡೆದಾಡಿಕೊಂಡು ಜಗಳ ಬಿಡಿಸಲು ಬಂದ ಸಿಬ್ಬಂದಿ ವಿರೇಶ್ ಸಂಗಮದ್ ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿತ್ತು. ಖೈದಿ ರಂಗಸ್ವಾಮಿ ಮೇಲೆ ಮೋಹನಕುಮಾರ್ ಮಾತ್ರವಲ್ಲದೆ ಇನ್ನು ಏಳೆಂಟು ಜನರು ಹಲ್ಲೆ ಮಾಡಿದ್ದರು. ಜಗಳ ಬಿಡಿಸುವಾಗ ವಿರೇಶ್ ಅವರನ್ನು ತಳ್ಳಿದ್ದರು ಎನ್ನಲಾಗಿತ್ತು. ಆದರೆ ನಗರ ಠಾಣೆಯಲ್ಲಿ ಶನಿವಾರ ದಾಖಲಿಸಿದ ಎಫ್‌ಐಆರ್ ನಲ್ಲಿ ಬೇರೆ ಮಾಹಿತಿ ದೃಢೀಕರಿಸಲಾಗಿದೆ.

ಆರೋಪಿ ವಿಕಾಸ್ ಎಂಬಾತ ತನ್ನನ್ನು ಆಸ್ಪತ್ರೆಗೆ ದಾಖಲಿಸಬೇಕೆಂದು ಕೋರಿದ್ದ. ಕಾರಾಗೃಹ ಸಿಬ್ಬಂದಿ ಮೊಹಮ್ಮದ್ ಅಲಿ ನದಾಫ್ ಅವರು ಆಸ್ಪತ್ರೆಗೆ ದಾಖಲಿಸುವುದು ಅಸಾಧ್ಯ ಎಂದಾಗ » **ನಾಲ್ಕನೇ ಪುಟದಲ್ಲಿ**

# ಎ.ಟಿ.ರಾಮಸ್ವಾಮಿ ರಾಜಕಾರಣಕ್ಕೆ ಮರಳಲಿ: ಒತ್ತಾಯ

• ಪ್ರಜೋದಯ ವರದಿ

**ಅರಕಲಗೂಡು:** ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಮತ್ತೆ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡು ಜನರ ಸೇವೆಗೆ ಮುಂದಾಗಬೇಕೆಂದು ಅವರ ಅಭಿಮಾನಿಗಳು ಒತ್ತಾಯಿಸಿದರು.

ತಾಲ್ಲೂಕಿನ ಮುಗಳೂರು ಗ್ರಾಮದ ಸಮುದಾಯ ಭವನದಲ್ಲಿ ಭಾನುವಾರ ನಡೆದ ಎ.ಟಿ. ರಾಮಸ್ವಾಮಿ ಅವರ ಅಭಿಮಾನಿಗಳು ಹಾಗು ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಮುಖಂಡರು, ರಾಮಸ್ವಾಮಿ ಅವರು ರಾಜಕೀಯದಿಂದ ದೂರ ಉಳಿಯದೆ ಮುಂದಿನ



ದಿನಗಳಲ್ಲಿ ಸಕ್ರಿಯವಾಗಿ ಜನರೊಂದಿಗೆ ಬೆರೆತು ಕ್ಷೇತ್ರದ ಅಭಿವೃದ್ಧಿ ಮತ್ತು ಜನಪರ ಹೋರಾಟಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಆಗ್ರಹಿಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಎಂ.ಟಿ.ಪಾಂಡುರಂಗ ಅವರು ಮಾತನಾಡಿ, ಅಭಿವೃದ್ಧಿ ವಿಚಾರದಲ್ಲಿ ಎ.ಟಿ.ರಾಮಸ್ವಾಮಿ ಅವರು ಸದಾ ಮುಂಚೂಣಿಯಲ್ಲಿದ್ದವರು. ತಮ್ಮ ಅಧಿಕಾರಾವಧಿಯಲ್ಲಿ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದು, ಹಲವು ಗ್ರಾಮಗಳಿಗೆ ಕಾಂಕ್ರೀಟ್ ರಸ್ತೆ, ಗ್ರಾಮ ಸಂಪರ್ಕ ರಸ್ತೆ ಸೇರಿ ಅಗತ್ಯ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಜನಪರ ಕೆಲಸಗಳನ್ನು ಮಾಡಿದ್ದಾರೆ. ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಹೊಂದಿರುವ ಇಂತಹ ನಾಯಕರು ರಾಜಕೀಯದಲ್ಲಿ ಹಿಂದುಳಿಯ ಬಾರದು. ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರ ಸಮಸ್ಯೆಗಳಿಗೆ ಧ್ವನಿಯಾಗುವ ಅಗತ್ಯವಿದೆ. ಆದ್ದರಿಂದ ರಾಮಸ್ವಾಮಿ ಅವರು ಮುಂದಿನ ರಾಜಕೀಯ ಹೆಜ್ಜೆಯ ಕುರಿತು ಸೂಕ್ತ ನಿರ್ಧಾರ ಕೈಗೊಂಡು ಸಕ್ರಿಯ ರಾಜಕಾರಣಕ್ಕೆ ಮರಳಬೇಕೆಂದು ಮನವಿ ಮಾಡಿದರು. » **ನಾಲ್ಕನೇ ಪುಟದಲ್ಲಿ**

## ಚುನಾವಣೆಗೆ ಟನ್‌ಗಟ್ಟಲೇ ಹಣ ಬೇಕು: ಸಿದ್ದರಾಮಯ್ಯ

**ತುಮಕೂರು:** ಪ್ರಸ್ತುತ ದಿನಗಳಲ್ಲಿ ಚುನಾವಣೆ ನಡೆಸಲು ಟನ್‌ಗಟ್ಟಲೇ ಹಣ ಬೇಕು. ನಾನು ಲೋಕಸಭೆ, ವಿಧಾನಸಭೆ ಸೇರಿ ಯಾವ ಚುನಾವಣೆಗೂ ಸ್ಪರ್ಧಿಸುವುದಿಲ್ಲವೆಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ದಿ|| ಮಾಜಿ ಸಚಿವ ವೀರಣ್ಣ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನಗೆ ಈಗ 80 ವರ್ಷ, ನಾನು ಆರೋಗ್ಯವಾಗಿದ್ದೇನೆ. ಎಷ್ಟು ವರ್ಷ ಬದುಕಿರುತ್ತೇ ನೆಂದು ಗೊತ್ತಿಲ್ಲ. ನಾನು ಮುಂದಿನ ಚುನಾವಣೆಗೆ ಸ್ಪರ್ಧಿಸಬಾರದು ಎಂದುಕೊಂಡಿದ್ದೇನೆ. ಅದಕ್ಕೆ ಕಾರಣ ವಯಸಲ್ಲ. ಚುನಾವಣಾ ವ್ಯವಸ್ಥೆ ಬಹಳ ದುಬಾರಿಯಾಗಿದೆ. ಚುನಾವಣೆ ವ್ಯವಸ್ಥೆ ಸುಧಾರಣೆ ಮಾಡದೇ ಹೋದರೆ ರಾಜಕಾರಣದಲ್ಲಿ ಪ್ರಾಮಾಣಿಕವಾಗಿ ಇರೋದಕ್ಕೆ ಸಾಧ್ಯವಿಲ್ಲ. ಇನ್ಮುಂದೆ ರಾಜಕಾರಣದಲ್ಲಿ ಸಕ್ರಿಯವಾಗಿ ಇರುತ್ತೇನೆ. ಆದರೆ ಸ್ಪರ್ಧೆ ಮಾಡು ವುದಿಲ್ಲವೆಂದರು.

ಸಾಮಾಜಿಕ ಜಾಲತಾಣಗಳ ಮುಖಾಂತರ ಪ್ರಚಾರ ನಡೀಲಿ. ಹಳ್ಳಿಗಳಿಗೆ ಹೋಗೋದು ಬೇಡ. ಅಪರಾಧ ಅಂತ ತೀರ್ಮಾನಿಸಬೇಕು. ಚುನಾವಣಾ ಆಯೋಗದವರು ಹೇಳಿದಷ್ಟು ಹಣ ಮಾತ್ರ ಖರ್ಚು ಮಾಡಬೇಕು. 1983 ಕ್ಕೂ 2023ರ ಚುನಾವಣೆಗೂ ಬಹಳಷ್ಟು ವ್ಯತ್ಯಾಸ. ಚುನಾವಣೆಯಲ್ಲಿ ಅಕ್ರಮವಾಗಿ ಹಣ ಖರ್ಚು ಮಾಡದಂತೆ, ಅದಕ್ಕೆ ಹೋರಾಟ ಮಾಡಬೇಕು. ಜನರು ಕೂಡ ಸಹಕಾರ ಮಾಡಬೇಕೆಂದರು.

## ಮಹಿಳೆ ಕೊರಳಿಂದ ಚಿನ್ನದ ಸರ ಕಿತ್ತು ಪರಾರಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೊಟ್ಟಿಗೆಯಲ್ಲಿ ಹಾಲು ಕರೆಯುತ್ತಿದ್ದಾಗ ಹಿಂದಿನಿಂದ ಬಂದ ಪರಿಚಿತ ವ್ಯಕ್ತಿ ಮಹಿಳೆ ಕೊರಳಿಂದ ಅಂದಾಜು 3 ಲ. ರೂ. ಮೌಲ್ಯದ ಚಿನ್ನದ ಮಾಂಗಲ್ಯ ಸರ ಕಿತ್ತು ಕೊಂಡು ಹೋಗಿರುವ ಘಟನೆ ತಾಲ್ಲೂಕಿನ ಮಲ್ಲನಘಟ್ಟ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಗ್ರಾಮದ ಮಂಜೇಗೌಡ ಎಂಬುವವರ ಪತ್ನಿ ಚಿಕ್ಕಮ್ಮ ಅವರ ಸರ ಕಳುವಾಗಿದೆ. ಬಡಕನಹಳ್ಳಿಯ ಆದರ್ಶ್ ಎಂಬಾತ ಸರ ಕದ್ದಿದ್ದಾನೆ ಎನ್ನಲಾಗಿದೆ.

ಆ.28ರ ಸಂಜೆ 6.30ರ ಸಮಯದಲ್ಲಿ ವಾಸದ ಮನೆಯ ಪಕ್ಕದಲ್ಲಿರುವ ದನದ ಕೊಟ್ಟಿಗೆ ಯಲ್ಲಿ ಎಮ್ಮೆಯ ಹಾಲು ಕರೆಯುತ್ತಿದ್ದಾಗ ಹಿಂದಿನಿಂದ ಬಂದ ಆದರ್ಶ್ ಕೊರಳಿಂದ 35 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಓಡಿದ್ದಾನೆ. ಪರಿಚಿತ ವ್ಯಕ್ತಿಯೇ ಸರ ಕದ್ದಿದ್ದರಿಂದ ಮಂಜೇಗೌಡ ಅವರು ಆದರ್ಶ್‌ನ ಮನೆಗೆ ಹೋಗಿ ಕೇಳಿದರೂ ಸರ ಕದ್ದಿಲ್ಲವೆಂದು ಹೇಳಿದ್ದಾನೆ. ಆತನನ್ನು ಕೂಡಲೇ ಬಂಧಿಸಿ ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

# ಜಿಲ್ಲಾದ್ಯಂತ ರಾಘವೇಂದ್ರ ಸ್ವಾಮಿ ಆರಾಧನೆ

• ಪ್ರಜೋದಯ ವರದಿ

**ಹಾಸನ:** ಗುರು ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವವನ್ನು ನಗರ ಸೇರಿ ಜಿಲ್ಲಾದ್ಯಂತ ಭಾನುವಾರ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ನಗರದ ಎಂ.ಜಿ.ರಸ್ತೆಯಲ್ಲಿರುವ ಗುರು ರಾಘವೇಂದ್ರ ಮಠದಲ್ಲಿ ಬೆಳಿಗ್ಗೆಯಿಂದ ಸಂಜೆ ವರೆಗೆ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಮುಂಜಾಗ್ರತಾ ಕ್ರಮವಾಗಿ ಬ್ಯಾರಿಕೇಡ್ ಅಳವಡಿಸಿ ವಾಹನ ಸಂಚಾರ ನಿಷೇಧಿಸಲಾಗಿತ್ತು. ಸಂಚಾರ ಠಾಣೆ ಪೊಲೀಸರು ಸಂಜೆವರೆಗೂ ಮೊಕ್ಕಾಂ ಹೂಡಿದ್ದರು.

ಗುರುರಾಯರ ಆರಾಧನಾ ಮಹೋತ್ಸವದ ಪ್ರಮುಖ ಘಟ್ಟವಾದ ಮಧ್ಯಾರಾಧನೆ, ವಿಶೇಷ ಪೂಜೆ, ಅಭಿಷೇಕ ನೆರವೇರಿತು. ಶ್ರೀ ಮಠದ ಪ್ರಾಂಗಣ ಹಾಗು ಮುಂಭಾಗ ತರಹೇವಾರಿ ಬಣ್ಣಗಳ ವಿದ್ಯುತ್ ದೀಪಗಳು ಹಾಗು ನವೀನ ಮಾದರಿಯಲ್ಲಿ ಹಣ್ಣು ತರಕಾರಿ ಮತ್ತು ಹೂವಿನ ಅಲಂಕಾರ ಮಾಡಲಾಗಿತ್ತು.

ಚನ್ನರಾಯಪಟ್ಟಣದ ಕೋಟೆ ರಾಘವೇಂದ್ರ ಸ್ವಾಮಿ ಮಠದಲ್ಲೂ ವಿಶೇಷ ಪೂಜೆಗಳು ನಡೆದವು. ತಾಲ್ಲೂಕಿನ ವಿವಿಧೆಡೆಗಳಿಂದ ಆಗಮಿಸಿದ ಸಾವಿರಾರು ಭಕ್ತ ಸಮೂಹ ರಾಯರ ದರ್ಶನ ಪಡೆದರು. ಮಠದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿ ಆವರಣದಲ್ಲಿ ಭಕ್ತರಿಗಾಗಿ ವಿವಿಧ ವ್ಯವಸ್ಥೆಗಳನ್ನು ಮಾಡಲಾಗಿತ್ತು.



ರಾಯರ 355ನೇ ಆರಾಧನಾ ಮಧ್ಯಾರಾಧನೆ ನಿಮಿತ್ತ ಶ್ರೀ ವಾಸುದೇವಾಚಾರ್ ಮತ್ತು ಜಿ.ಎಸ್.ವಾದಿರಾಜ ಆಚಾರ್ಯರ ನೇತೃತ್ವದಲ್ಲಿ ಮುಂಜಾನೆ ಉಷಾಕಾಲ ಪೂಜೆ ಧಾರ್ಮಿಕ ಕಾರ್ಯಗಳು ಆರಂಭವಾದವು. ಮಧ್ಯಾರಾಧನೆಯ ದಿನ ಭಕ್ತರಿಗೆ ವಿಶೇಷ ಅನುಗ್ರಹ ದೊರೆ ಯುತ್ತದೆಂಬ ಪ್ರತೀತಿ ಇದೆ. ಪ್ರತಿನಿತ್ಯದ ಪಂಚಾಮೃತ ಅಭಿಷೇಕಕ್ಕಿಂತ ಹತ್ತುಪಟ್ಟು ಹೆಚ್ಚು ಪದಾರ್ಥಗಳನ್ನು ಬಳಸಲಾಗುತ್ತದೆ. ಹಾಲು, ಮೊಸರು, ತುಪ್ಪ, ಜೇನುತುಪ್ಪ, ಹಣ್ಣು, ಗೋಡಂಬಿ, ಒಣದ್ರಾಕ್ಷಿ ಸೇರಿ ವಿವಿಧ ಪದಾರ್ಥಗಳಿಂದ ಪಂಚಾಮೃತ ಅಭಿಷೇಕ, ಬಳಿಕ ರಜತ ಕವಚದೊಂದಿಗೆ ಅಲಂಕಾರ. ರಾಯರ ಪಾದಪೂಜೆ ಹಾಗೂ ಬೃಂದಾವನಕ್ಕೆ ಹೂ ಅಲಂಕಾರ ನೆರವೇರಿತು. ಜೊತೆಯಲ್ಲಿ ಅಲಂಕಾರ ಪಂಕ್ತಿಯ ಬ್ರಾಹ್ಮಣ ಪೂಜೆ ಮತ್ತು ಮಹಾಮಂಗಳಾರತಿ ಇನ್ನಿತರ ಧಾರ್ಮಿಕ ಕಾರ್ಯಗಳು ವಿಧಿವತ್ತಾಗಿ ಸಂಪನ್ನಗೊಂಡವು.

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಕಲಾಸರಸ್ವತಿ ನೃತ್ಯನಿಕೇತನ, ಕು.ಅಶ್ವಿನಿ ಅವರಿಂದ ಭರತನಾಟ್ಯ ಕಾರ್ಯಕ್ರಮ ನೆರವೇರಿತು. ಬಳಿಕ ಮಠದ ಪ್ರಾಕಾರದಲ್ಲಿ ಚಿನ್ನದ ರಥೋತ್ಸವ ಮಹಾಮಂಗಳಾರತಿ, ನಂತರ ತೀರ್ಥ ಪ್ರಸಾದ ವಿನಿಯೋಗ ಜರಗಿತು. ಶ್ರೀಮಠಕ್ಕೆ ಭಕ್ತರು ಶ್ರದ್ಧಭಕ್ತಿಪೂರ್ವಕವಾಗಿ ನಮನ ಸಲ್ಲಿಸಿ ಗುರುಗಳ ದರ್ಶನ ಪಡೆದರು.

ಮಧ್ಯಾರಾಧನೆ ಬಳಿಕ ಆ.31ರ ಸೋಮವಾರ ಉತ್ತರಾರಾಧನೆ ನಡೆಯಲಿದೆ. ಪಟ್ಟಣದ ರಾಜಬೀದಿಯಲ್ಲಿ ಭವ್ಯ ರಥೋತ್ಸವ ಆಯೋಜಿಸಲಾಗಿದೆ. ಇದರೊಂದಿಗೆ ರಾಯರ ಆರಾಧನಾ ಮಹೋತ್ಸವದ ಪ್ರಮುಖ ಮೂರು ದಿನಗಳ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ.

### ಬೇಲೂರಿನಲ್ಲಿ ಶ್ರದ್ಧಾ ಭಕ್ತಿಯ ಗುರು ರಾಯರ ಆರಾಧನೆ



ಬೇಲೂರು: ಗುರು ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವವು ನೂರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ಪಟ್ಟಣದ ಕೋಟೆ ಶ್ರೀ ರಾಘವೇಂದ್ರ ಮಠದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು.

ಕೋಟೆ ಶ್ರೀ ರಾಘವೇಂದ್ರ ಮಠದ ಪುರೋಹಿತ ಸುಧೀಂದ್ರಚಾರ್ ಅವರು ಮಾತನಾಡಿ, 355 ವರ್ಷಗಳ ಹಿಂದೆ ಗುರು ರಾಘವೇಂದ್ರ ಸ್ವಾಮೀಜಿ ಸಶರೀರವಾಗಿ ಬೃಂದಾವನಸ್ಥರಾಗಿ ಜಪ, ತಪ, ಅನುಷ್ಠಾನಗಳ ಮೂಲಕ ಅಪಾರ ಪುಣ್ಯ ಸಂಪಾದಿಸಿದ್ದು ಇಂದಿಗೂ ಭಕ್ತರಿಗೆ ತಮ್ಮ ಅನುಗ್ರಹ ಕರುಣಿಸುತ್ತಿದ್ದಾರೆ. ಗುರುಗಳ ಅನುಗ್ರಹ ಪಡೆಯಲು ಭಕ್ತರು ಶ್ರದ್ಧೆ, ಭಕ್ತಿಯಿಂದ ನೃತ್ಯ, ಸಂಗೀತ, ಭಜನೆ, ಹೆಜ್ಜೆ ಸೇವೆ, ಪಾದ ಸೇವೆ, ದೀಪ ಸೇವೆ, ಉರುಳು ಸೇವೆ ಸೇರಿ ವಿವಿಧ ಸೇವೆಗಳನ್ನು ಸಲ್ಲಿಸುತ್ತಾರೆ. ಭಕ್ತರ ನಂಬಿಕೆಗನುಗುಣವಾಗಿ ಗುರು ರಾಘವೇಂದ್ರ ಸ್ವಾಮಿಗಳ ಅನುಗ್ರಹ ದೊರೆಯುತ್ತದೆ. ಜಾತಿ, ಮತದ ತಾರತಮ್ಯವಿಲ್ಲದೆ ಎಲ್ಲರಿಗೂ ಅನುಗ್ರಹ ನೀಡಿದ ಗುರು ರಾಘವೇಂದ್ರ ಸ್ವಾಮಿಗಳನ್ನು ಜಗದ್ಗುರು ಎಂದು ಭಕ್ತರು ಗೌರವಿಸುತ್ತಾರೆಂದರು.

ರಾಘವೇಂದ್ರ ಸ್ವಾಮಿ ಮಹಿಮೆ ಅಪಾರವಾಗಿದ್ದು, ಕಲಿಯುಗದಲ್ಲಿ ಗುರುಗಳ ರೂಪದಲ್ಲಿ ರಾಯರ ಅನುಗ್ರಹ ಪಡೆಯುವುದು ಭಕ್ತರಿಗೆ ಪುಣ್ಯದಾಯಕವಾಗಿದೆ. ಪ್ರತಿವರ್ಷ ಆರಾಧನಾ ಮಹೋತ್ಸವವನ್ನು ಭಕ್ತರ ಸಹಕಾರದೊಂದಿಗೆ ವಿಶೇಷವಾಗಿ ಆಚರಿಸಲಾಗುತ್ತಿದೆ. ವಿಶೇಷ ಪೂಜೆ, ಪಂಚಾಮೃತ, ಫಲಾಮೃತ ಅಭಿಷೇಕ, ಹೂವಿನ ಅಲಂಕಾರ ಸೇರಿ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಮಸ್ತ ಭಕ್ತಾಧಿಗಳಿಗೆ ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆಯ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗುರು ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದು, ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡು ಅನುಗ್ರಹಕ್ಕೆ ಪಾತ್ರರಾಗಬೇಕೆಂದರು.

## ಕ್ರಿಕೆಟ್ ಆಡುತ್ತಿದ್ದಾಗ ಕುಸಿದು ಬಿದ್ದು ಯುವಕ ಸಾವು



• ಪ್ರಜೋದಯ ವರದಿ

**ಅರಸೀಕೆರೆ:** ಸ್ನೇಹಿತರ ಜೊತೆ ಕ್ರಿಕೆಟ್ ಆಡುತ್ತಿದ್ದಾಗ ಕುಸಿದುಬಿದ್ದು ಯುವಕ ಮೃತಪಟ್ಟಿರುವ ಘಟನೆ ನಡೆದಿದೆ.

ನಗರದ ಕೆಂಗಲ್ ಸಿದ್ದೇಶ್ವರ ಬಡಾವಣೆ ನಿವಾಸಿ, ಉದ್ಯಮಿ ಅರವಿಂದ್ ಜೈನ್ ಹಾಗು ರಾಣಿ ಸಂಗ್ರಾಣಿ ದಂಪತಿ ಪುತ್ರ, ಮಯಾಂಕ್ ಜೈನ್ (19) ಮೃತ. ಬೆಂಗಳೂರಿನ ಆಚಾರ್ಯ ಇಂಜಿನೀಯರಿಂಗ್ ಕಾಲೇಜಿನಲ್ಲಿ ಪ್ರಥಮ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿದ್ದ ಯುವಕ ರಜೆ ಹಿನ್ನಲೆಯಲ್ಲಿ ಶನಿವಾರ ಮನೆಗೆ ಬಂದಿದ್ದ. ಸ್ನೇಹಿತರ ಜೊತೆ ಕ್ರಿಕೆಟ್ ಆಡಲು ಭಾನುವಾರ ತಿಪಟೂರಿಗೆ ತೆರಳಿದ್ದ. ಕ್ರಿಕೆಟ್ ಆಟವಾಡುತ್ತಿದ್ದಾಗ ದಿಢೀರ್ ಕುಸಿದು ಬಿದ್ದಿದ್ದಾನೆ. ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಿಲ್ಲ. ನಗರ ಹೊರವಲಯದ ಜೈನ ಮುಕ್ತಿ ಧಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

# ನವಿಲಿನ ಗರಿಗಳ ನಡುವೆ ಅರಳಿದ 800 ವರ್ಷದ ಇತಿಹಾಸ ವಿಟ್ಲದ ನವಿಲು ಬಸದಿ

ಕೆಲವು ಸ್ಥಳಗಳಿಗೆ ನಾವು ಪ್ರವಾಸ ಹೋಗುತ್ತೇವೆ. ಕೆಲವು ಸ್ಥಳಗಳು ನಮ್ಮೊಳಗೊಂದು ಅನುಭವವನ್ನು ಬಿಟ್ಟು ಹೋಗುತ್ತವೆ. ಇನ್ನು ಕೆಲವು ಸ್ಥಳಗಳು ಇತಿಹಾಸ, ಕಲೆ, ಪ್ರಕೃತಿ ಮತ್ತು ಆಧ್ಯಾತ್ಮಿಕತೆಯನ್ನು ಒಂದೇ ಕಡೆ ಪರಿಚಯಿಸುತ್ತವೆ. ಇಂತಹ ಅನುಭವ ನೀಡಿದ ಸ್ಥಳಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲ ಪೇಟೆಯ ಹೃದಯಭಾಗದಲ್ಲಿರುವ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿ ಕೂಡ ಒಂದು.

ಕೆಲವು ದಿನಗಳ ಹಿಂದೆ ಕುಟುಂಬಸ್ಥರೊಂದಿಗೆ ವಿಟ್ಲಕ್ಕೆ ತೆರಳಿದ್ದ ಸಂದರ್ಭದಲ್ಲಿ ಈ ಬಸದಿಗೆ ಭೇಟಿ ನೀಡುವ ಅವಕಾಶ ದೊರೆಯಿತು. ಮೊದಲ ನೋಟದಲ್ಲೇ ಬಸದಿಯ ವಿನೂತನ ವಿನ್ಯಾಸ ಮನಸ್ಸನ್ನು ಸೆಳೆಯಿತು. ದೂರದಿಂದಲೇ ಕಾಣುವ ಅದರ ಮೇಲ್ಛಾವಣಿ, ಗರಿಗಳನ್ನು ಹರಡಿ ಕುಳಿತಿರುವ ಭವ್ಯ ನವಿಲನ್ನು ನೆನಪಿಸುವಂತಿತ್ತು. ಹತ್ತಿರ ಹೋಗುತ್ತಿದ್ದಂತೆ ಅದರ ಸೌಂದರ್ಯ ಮತ್ತಷ್ಟು ಸ್ಪಷ್ಟವಾಯಿತು.



**ಇತಿಹಾಸದ ಪುಟಗಳ ನಡುವೆ ಒಂದು ಹೊಸ ರೂಪ**

ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಈ ಜೈನ ಬಸದಿ ವಿಟ್ಲ ಪೇಟೆಯ ಮಧ್ಯಭಾಗದಲ್ಲಿದ್ದು, ಶತಮಾನಗಳಿಂದ ಜೈನ ಧರ್ಮೀಯರ ಆರಾಧನಾ ಕೇಂದ್ರವಾಗಿ ಗುರುತಿಸಿಕೊಂಡಿದೆ. ಕಾಲ ಬದಲಾದರೂ ಅದರ ಧಾರ್ಮಿಕ ಮಹತ್ವ ಉಳಿದುಕೊಂಡಿದೆ. ಇದೀಗ ಪುನರ್‌ನಿರ್ಮಾಣದ ಮೂಲಕ ಬಸದಿ ಹೊಸ ರೂಪ ಪಡೆದುಕೊಂಡಿದ್ದು, ಹಳೆಯ ಪರಂಪರೆಗೆ ಹೊಸ ಕಲ್ಪನೆಯ ಸ್ಪರ್ಶ ನೀಡಲಾಗಿದೆ.

ನವಿಲಿನ ಆಕಾರದಲ್ಲಿ ನಿರ್ಮಿಸಿರುವ ಮೇಲ್ಛಾವಣಿ ಈ ಬಸದಿಯ ಪ್ರಮುಖ ಆಕರ್ಷಣೆ. ನವಿಲು ತನ್ನ ಗರಿಗಳನ್ನು ಹರಡಿ ಕುಳಿತಿರುವಂತೆ ಕಾಣುವ ಈ ವಿನ್ಯಾಸವನ್ನು ನೋಡುತ್ತಿದ್ದರೆ, ಕಲ್ಲು-ತಾಮ್ರಗಳಿಂದ ರೂಪುಗೊಂಡ ಕಲಾಕೃತಿಯೊಂದು ಜೀವಂತವಾಗಿರುವಂತೆ ಭಾಸವಾಗುತ್ತದೆ.

**ತಾಮ್ರದಲ್ಲಿ ಅರಳಿದ ನವಿಲು**

ಬಸದಿಯ ಮೇಲ್ಛಾವಣಿಗೆ ನವಿಲಿನ ನೈಸರ್ಗಿಕ ಬಣ್ಣಗಳನ್ನು ಹೋಲುವ ಬಣ್ಣಗಳನ್ನು ಬಳಿಯಲಾಗಿದೆ. ಮೇಲ್ಛಾವಣಿಯ ಮುಂಭಾಗದಲ್ಲಿರುವ ನವಿಲಿನ ಮುಖವನ್ನು ಸುಮಾರು 150 ಕೆ.ಜಿ. ತಾಮ್ರ ಬಳಸಿ ನಿರ್ಮಿಸಲಾಗಿದೆ. ಸಂಪೂರ್ಣ ಮೇಲ್ಛಾವಣಿಗೂ ತಾಮ್ರದ ಹೊದಿಕೆ ನೀಡಿರುವುದು ಇದರ ವೈಶಿಷ್ಟ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

ಮಾಹಿತಿಯ ಪ್ರಕಾರ, ಈ ವಿಶಿಷ್ಟ ನವಿಲು ವಿನ್ಯಾಸದ ಮೇಲ್ಛಾವಣಿ ನಿರ್ಮಾಣಕ್ಕೆ ಸುಮಾರು ಒಂದು ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. ಪರಿಸರ ಸ್ನೇಹಿ ಬಣ್ಣಗಳನ್ನು ಬಳಸಲಾಗಿದ್ದು, ಅವು ಸುಮಾರು 12 ವರ್ಷಗಳ ಕಾಲ ಬಾಳಿಕೆ ಬರಲಿವೆ ಎನ್ನಲಾಗಿದೆ.

**ಕಲ್ಲುಗಳಲ್ಲಿ ಕೆತ್ತಿದ ಕಲಾ ವೈಭವ**

ಬಸದಿಯ ಸುತ್ತಮುತ್ತ ನೋಡುತ್ತಾ ಹೋದಂತೆ ಕಲ್ಲಿನ ಕಲಾಕೃತಿಗಳು ಗಮನ ಸೆಳೆಯುತ್ತವೆ. ನಿರ್ಮಾಣದಲ್ಲಿ ನೈಸರ್ಗಿಕ ಕಲ್ಲುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಕಾರ್ಕಳದ ಕಪ್ಪು ಕಲ್ಲು, ತಮಿಳುನಾಡಿನ ಈರೋಡಿನ ಕಲ್ಲು ಹಾಗೂ ಇಳಕಲ್‌ನ ಕೆಂಪು ಹರಳು ಸೇರಿದಂತೆ ವಿವಿಧ ಭಾಗಗಳಿಂದ ತರಿಸಲಾದ ಕಲ್ಲುಗಳನ್ನು ಬಳಸಲಾಗಿದೆ. ಕಲ್ಲಿನ ಮೇಲೆ ಮೂಡಿಸಿರುವ ಸೂಕ್ಷ್ಮ ಕೆತ್ತನೆಗಳು ಕಲಾವಿದರ ಶ್ರಮ ಮತ್ತು ಕೌಶಲ್ಯವನ್ನು ಎತ್ತಿ ತೋರಿಸುತ್ತವೆ.

ಪ್ರತಿ ಕೆತ್ತನೆಯನ್ನೂ ಗಮನಿಸುತ್ತಾ ನಿಂತಾಗ, ಕಲ್ಲಿಗೂ ಜೀವ ತುಂಬಬಹುದು ಎಂಬುದನ್ನು ಇಲ್ಲಿನ ಶಿಲ್ಪಕಲೆ ಹೇಳುವಂತಿತ್ತು.

**ಕುಟುಂಬದೊಂದಿಗೆ ಕಳೆದ ನೆನಪಿನ ಕ್ಷಣಗಳು**

ಕುಟುಂಬಸ್ಥರೊಂದಿಗೆ ಭೇಟಿ ನೀಡಿದ್ದರಿಂದ ಈ ಪ್ರವಾಸಕ್ಕೆ ಮತ್ತೊಂದು ವಿಶೇಷತೆ ಇತ್ತು. ಬಸದಿಯ ಆವರಣಕ್ಕೆ ಕಾಲಿಟ್ಟ ಕ್ಷಣದಿಂದಲೇ ಮನಸ್ಸಿಗೆ ಒಂದು ರೀತಿಯ ನೆಮ್ಮದಿ ಮತ್ತು ಉಲ್ಲಾಸದ ಅನುಭವವಾಯಿತು.

ನಗರದ ಗದ್ದಲದಿಂದ ಸ್ವಲ್ಪ ದೂರ ಸರಿದು, ಇತಿಹಾಸದೊಂದಿಗೆ ಬೆರೆತಿರುವ ಈ ತಾಣದಲ್ಲಿ ಕೆಲಕಾಲ ಕಳೆಯುವುದು ಮನಸ್ಸಿಗೆ ಆಹ್ಲಾದ ನೀಡಿತು. ಕುಟುಂಬದವರೊಂದಿಗೆ ಬಸದಿಯ ವಿನ್ಯಾಸವನ್ನು ವೀಕ್ಷಿಸುತ್ತಾ, ಅದರ ವಿಶೇಷತೆಗಳ ಕುರಿತು ಮಾತನಾಡುತ್ತಾ ಕಳೆದ ಕ್ಷಣಗಳು ಪ್ರವಾಸದ ಸುಂದರ ನೆನಪುಗಳಾಗಿ ಉಳಿದವು.

ವಿಶೇಷವಾಗಿ ನವಿಲಿನ ವಿನ್ಯಾಸದ ಮೇಲ್ಛಾವಣಿ ಎಲ್ಲರ ಕುತೂಹಲ ಕೆರಳಿಸಿತು. ವಿವಿಧ ಕೋನಗಳಿಂದ ಅದನ್ನು ನೋಡುತ್ತಾ, ಅದರ ಚಿತ್ರಗಳನ್ನು ಸೆರೆಹಿಡಿಯುತ್ತಾ, ಅಲ್ಲಿನ ವಾತಾವರಣವನ್ನು ಆಸ್ವಾದಿಸುತ್ತಿದ್ದಾಗ ಸಮಯ ಕಳೆದದ್ದೇ ಗೊತ್ತಾಗಲಿಲ್ಲ.

**ಇಬ್ಬರು ಯುವಕರ ಕಲ್ಪನೆಗೆ ಸಾಕಾರ ರೂಪ**

ಈ ವಿನೂತನ ನವಿಲು ಬಸದಿಯ ಕಲ್ಪನೆಯ ಹಿಂದೆ ಜಿತೇಶ್ ಮತ್ತು ದರ್ಶನ್ ಎಂಬ ಇಬ್ಬರು ಯುವಕರ ಸೃಜನಶೀಲ ಚಿಂತನೆಯಿದೆ ಎಂದು ತಿಳಿದುಬಂದಿತು. ಶತಮಾನಗಳ ಇತಿಹಾಸ ಹೊಂದಿರುವ ಧಾರ್ಮಿಕ ತಾಣವೊಂದಕ್ಕೆ ಹೊಸ ರೂಪ ನೀಡುವಾಗ ಅದರ ಪರಂಪರೆಯನ್ನು ಉಳಿಸಿಕೊಂಡು, ಆಧುನಿಕ ಕಲ್ಪನೆಯನ್ನು ಬೆಸೆಯುವುದು ಸುಲಭದ ಕೆಲಸವಲ್ಲ. ಆದರೆ ಇಲ್ಲಿ ಆ ಪ್ರಯತ್ನ ವಿಭಿನ್ನವಾಗಿ ಮೂಡಿಬಂದಿದೆ.

**ವಿಟ್ಲಕ್ಕೆ ಹೋದರೆ ಒಮ್ಮೆ ಭೇಟಿ ನೀಡಿ**

ವಿಟ್ಲದ ಪೇಟೆಯ ಮಧ್ಯಭಾಗದಲ್ಲೇ ಇರುವುದರಿಂದ ಈ ಬಸದಿಗೆ ಭೇಟಿ ನೀಡುವುದು ಸುಲಭ. ಧಾರ್ಮಿಕ ನಂಬಿಕೆಯ ತಾಣವಾಗಿರುವುದರ ಜೊತೆಗೆ, ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ವಿನೂತನ ವಿನ್ಯಾಸವನ್ನು ಆಸ್ವಾದಿಸಲು ಬಯಸುವವರಿಗೂ ಇದು ಗಮನಾರ್ಹ ಸ್ಥಳ.

ನನ್ನ ಪಾಲಿಗೆ ಈ ಭೇಟಿ ಕೇವಲ ಒಂದು ಪ್ರವಾಸವಾಗಿರಲಿಲ್ಲ. 800 ವರ್ಷಗಳ ಇತಿಹಾಸವನ್ನು ಹೊತ್ತಿರುವ ಒಂದು ಪಾರಂಪರಿಕ ತಾಣವು ಹೊಸ ರೂಪದಲ್ಲಿ ಹೇಗೆ ಜೀವಂತವಾಗಬಹುದು ಎಂಬುದನ್ನು ಕಣ್ಣಾರೆ ಕಂಡ ಅನುಭವವಾಗಿತ್ತು.

ವಿಟ್ಲದಿಂದ ಹಿಂದಿರುಗುವಾಗಲೂ ಆ ನವಿಲಿನ ಗರಿಗಳನ್ನು ಹರಡಿ ಕುಳಿತಿರುವಂತೆ ಕಾಣುತ್ತಿದ್ದ ಬಸದಿ ಮನಸ್ಸಿನಲ್ಲಿ ಉಳಿದುಕೊಂಡಿತ್ತು. ಕುಟುಂಬದೊಂದಿಗೆ ಕಳೆದ ಆ ದಿನ, ಕಂಡ ದೃಶ್ಯಗಳು ಮತ್ತು ಅನುಭವಿಸಿದ ನೆಮ್ಮದಿ ಇವೆಲ್ಲವೂ ಸೇರಿ ಈ ಪ್ರವಾಸವನ್ನು ಒಂದು ಸುಂದರ ನೆನಪಾಗಿ ಮಾಡಿವೆ.

ಇತಿಹಾಸವನ್ನು ಉಳಿಸಿಕೊಂಡು, ಕಲ್ಪನೆಗೆ ರೆಕ್ಕೆಗಳನ್ನು ಕೊಟ್ಟಿರುವ ವಿಟ್ಲದ ಈ ನವಿಲು ಬಸದಿ ನಿಜಕ್ಕೂ ಒಮ್ಮೆ ನೋಡಬೇಕಾದ ಅಪರೂಪದ ತಾಣ.

# ಡಿಜೆ ನಿಷಿದ್ಧ: ಸಂಭ್ರಮಕ್ಕೆ ಕಡಿವಾಣವಲ್ಲ, ಶಿಸ್ತು ಅಗತ್ಯ



ಹಬ್ಬ, ಉತ್ಸವ, ಮೆರವಣಿಗೆ ಎಂದರೆ ನಮ್ಮ ಸಮಾಜದಲ್ಲಿ ಸಂಭ್ರಮ, ಭಕ್ತಿ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯ ಸಂಕೇತ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಸಂಭ್ರಮದ ಸ್ವರೂಪದಲ್ಲಿ ಡಿಜೆ, ಅತಿಯಾದ ಧ್ವನಿವರ್ಧಕ ಮತ್ತು ಕರ್ಕಶ ಸಂಗೀತ ಪ್ರಮುಖ ಸ್ಥಾನ ಪಡೆದುಕೊಂಡಿರುವುದು ಆತಂಕಕಾರಿ ಬೆಳವಣಿಗೆ.

ಹಬ್ಬದ ಹೆಸರಿನಲ್ಲಿ ರಾತ್ರಿ ತಡವರೆಗೂ ಕಿವಿಗಡಚಿಕ್ಕುವ ಶಬ್ದ, ಅಶಿಸ್ತಿನ ಮೆರವಣಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ವರ್ತನೆಗಳು ಸಾಮಾನ್ಯವಾಗುತ್ತಿವೆ. ಡಿಜೆ ಬಳಕೆಗೆ ನಿರ್ಬಂಧ ಹೇರಿರುವುದರ ಉದ್ದೇಶ ಯಾರೊಬ್ಬರ ಧಾರ್ಮಿಕ ಅಥವಾ ಸಾಂಸ್ಕೃತಿಕ ಆಚರಣೆಯನ್ನು ತಡೆಯುವುದಲ್ಲ. ಸಾರ್ವಜನಿಕ ಶಾಂತಿ, ಕಾನೂನು ಸುವ್ಯವಸ್ಥೆ ಹಾಗೂ ಶಬ್ದ ಮಾಲಿನ್ಯ ನಿಯಂತ್ರಣವೇ ಇದರ ಹಿಂದಿರುವ ಮುಖ್ಯ ಆಶಯ.

ವೃದ್ಧರು, ಮಕ್ಕಳು, ರೋಗಿಗಳು, ವಿದ್ಯಾರ್ಥಿಗಳು ಹಾಗೂ ರಾತ್ರಿ ಕೆಲಸ ಮಾಡುವವರಿಗೂ ಅತಿಯಾದ ಶಬ್ದ ತೀವ್ರ ತೊಂದರೆ ಉಂಟುಮಾಡುತ್ತದೆ. ಆದ್ದರಿಂದ ಸಂಭ್ರಮದ ಹಕ್ಕಿನ ಜೊತೆಗೆ ಇತರರ ನೆಮ್ಮದಿಯ ಹಕ್ಕನ್ನೂ ಸಮಾಜ ಗೌರವಿಸಬೇಕು. ಆದರೆ ನಿರ್ಬಂಧ ಜಾರಿಯಲ್ಲಿ ಪಾರದರ್ಶಕತೆ ಮತ್ತು ಸಮಾನತೆ ಅತ್ಯಂತ ಮುಖ್ಯ. ಒಂದು ಕಡೆ ನಿಯಮ ಜಾರಿಗೊಳಿಸಿ ಮತ್ತೊಂದು ಕಡೆ ಉಲ್ಲಂಘನೆಗೆ ಅವಕಾಶ ನೀಡಿದರೆ ಜನರಲ್ಲಿ ಅಸಮಾಧಾನ ಮೂಡುವುದು ಸಹಜ. ಹೀಗಾಗಿ ಯಾವುದೇ ಧಾರ್ಮಿಕ, ಸಾಮಾಜಿಕ ಅಥವಾ ರಾಜಕೀಯ ಕಾರ್ಯಕ್ರಮವಾಗಿರಲಿ ನಿಯಮ ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗಬೇಕು. ಅಧಿಕಾರಿಗಳು ಕೂಡ ಮುಂಚಿತವಾಗಿ ಸ್ಪಷ್ಟ ಮಾರ್ಗಸೂಚಿ ನೀಡಿ, ಅನುಮತಿ ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸಬೇಕು.

ಮೆರವಣಿಗೆಗಳಲ್ಲಿ ಡಿಜೆ ಇಲ್ಲದೆ ಸಂಭ್ರಮ ಸಾಧ್ಯವಿಲ್ಲ ಎಂಬ ಮನೋಭಾವವೂ ಬದಲಾಗಬೇಕಿದೆ. ನಮ್ಮ ಸಾಂಪ್ರದಾಯಿಕ ವಾದ್ಯಗಳು, ಭಜನೆ, ನಾದಸ್ವರ, ಚಂಡೆ, ಬ್ಯಾಂಡ್ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳ ಮೂಲಕವೂ ಉತ್ಸವದ ಮೆರುಗು ಹೆಚ್ಚಿಸಬಹುದು. ಆಧುನಿಕತೆಯನ್ನು ಸ್ವೀಕರಿಸುವುದರ ಜೊತೆಗೆ ನಮ್ಮ ಸಂಸ್ಕೃತಿಯ ವೈವಿಧ್ಯತೆಯನ್ನು ಉಳಿಸಿಕೊಳ್ಳುವುದು ಸಮಾಜದ ಜವಾಬ್ದಾರಿ. ಡಿಜೆ ನಿಷೇಧವನ್ನು ಕೇವಲ ಪೊಲೀಸ್ ಕ್ರಮವೆಂದು ನೋಡುವ ಬದಲು, ನಮ್ಮ ಸಂಭ್ರಮ ಇನ್ನೊಬ್ಬರ ನೆಮ್ಮದಿಗೆ ಧಕ್ಕೆ ತರಬಾರದು ಎಂಬ ಸಾಮಾಜಿಕ ಹೊಣೆಗಾರಿಕೆಯ ಸಂದೇಶವಾಗಿ ಅರ್ಥೈಸಬೇಕು. ಸಂಭ್ರಮ ಇರಲಿ, ಆದರೆ ಶಿಸ್ತು ಇರಲಿ; ಸಂಗೀತ ಇರಲಿ, ಶಬ್ದ ಮಾಲಿನ್ಯವಾಗದಿರಲಿ; ಮೆರವಣಿಗೆ ಇರಲಿ, ಆದರೆ ಸಾರ್ವಜನಿಕರಿಗೆ ತೊಂದರೆಯಾಗದಿರಲಿ.

ಕಾನೂನಿನ ಭಯದಿಂದಲ್ಲ, ಸಾಮಾಜಿಕ ಜವಾಬ್ದಾರಿಯ ಅರಿವಿನಿಂದ ನಿಯಮ ಪಾಲಿಸುವ ದಿನ ಬಂದಾಗ ಮಾತ್ರ ನಮ್ಮ ಹಬ್ಬಗಳು ನಿಜವಾದ ಅರ್ಥದಲ್ಲಿ ಸಂಭ್ರಮದ ಹಬ್ಬಗಳಾಗುತ್ತವೆ.

# ಗುರುರಾಯರ ನಿಗೂಢ ಪವಾಡಗಳು

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ
ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ
ಶ್ರೀರಾಘವೇಂದ್ರಗುರವೇ ನಮೋsತ್ಯಂತದಯಾಲವೇ

ಶ್ರೀ ಗುರು ರಾಘವೇಂದ್ರ ಸ್ವಾಮಿಗಳು ದೈವಾಂಶ ಸಂಭೂತರು. ಅವರ ತಪಸ್ಸು ಶ್ರದ್ಧೆ- ಜ್ಞಾನ ಮತ್ತು ಕರುಣೆಯ ಜೀವಂತಿಕೆಯ ಸಾಕ್ಷಿಯಾಗಿದ್ದರು. ಅವರು ಮಾಡಿದ ಅದ್ಭುತವಾದ ಪವಾಡಗಳು, ಜನಗಳ ಬಾಯಿಂದ ಬಾಯಿಗೆ ಹರಡಿ ಅದೆಷ್ಟೊ ಭಕ್ತರ ಜೀವನವನ್ನು ಬೆಳಗಿಸಿದೆ. ಕೇಳರಿಯದ ಅಪರೂಪದ ಕೆಲವು ಪವಾಡಗಳು.

ಈ ಘಟನೆ ನೂರಾರು ವರ್ಷಗಳ ಹಿಂದಿನ ಘಟನೆ ಆಗಿರಬಹುದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರ ಧರ್ಮಸ್ಥಳದ ಸಮೀಪದ ಒಂದು ಹಳ್ಳಿಯಲ್ಲಿ ವಿಷ್ಣು ಭಕ್ತರಾದ ಒಬ್ಬ ಬ್ರಾಹ್ಮಣನಿದ್ದನು. ಇವರಿಗೆ 12 ವರ್ಷದ ಒಬ್ಬ ಮಗನಿದ್ದ. ಕಡು ಬಡತನ ಊಟವಿಲ್ಲದ ದಿನಗಳೇ ಹೆಚ್ಚು. ನಿಲ್ಲಲು ಸರಿಯಾದ ನೆಲೆ ಇರಲಿಲ್ಲ ಆದರೂ ಬ್ರಾಹ್ಮಣ ಮಾತ್ರ ದಿನಂಪ್ರತಿ ಗುರುಗಳ ಸ್ಮರಣೆ ಮಾಡುತ್ತಿದ್ದರು. ಇವನ ಮಗನಿಗೆ ಸಹಜವಾದ ಆಸೆಗಳಿದ್ದರೂ ಪೂರೈಸುವುದು ಅಸಾಧ್ಯವಾಗಿತ್ತು. ಬ್ರಾಹ್ಮಣ ಒಂದಷ್ಟು ಮಕ್ಕಳಿಗೆ ವೇದ ಪಾಠ ಹೇಳಿಕೊಡುತ್ತಿದ್ದರು. ಮಗನು ಕಲಿಯಲಿ ಎಂದು ಆಸೆ ಇದ್ದರೂ, ಮಗನಿಗೆ ಕಲಿಕೆಯಲ್ಲಿ ಎಂದು ಆಸಕ್ತಿ ಇರಲಿಲ್ಲ.

ಮಗ ವೇದ - ಉಪನಿಷತ್ತು-ಪುರಾಣ ಮಂತ್ರಗಳನ್ನು ಕಲಿಯಲಿ, ಬಡತನ ವಿದ್ದರೆ ಇರಲಿ ಮಗ ವೇದ ಕಲಿತು ಪಂಡಿತನಾಗಲಿ ಎಂಬ ಆಸೆ. ಎಷ್ಟೋ ಸಲ ಬ್ರಾಹ್ಮಣನು ಮಗನಿಗೆ ಬುದ್ಧಿವಾದ ಹೇಳಿದರೂ ಅವನು ಕೇಳಲಿಲ್ಲ ನಿರಾಶೆಗೊಂಡ ಬ್ರಾಹ್ಮಣ ಒಮ್ಮೆ ರಾಘವೇಂದ್ರ ಸ್ವಾಮಿಗಳ ಪ್ರಾರ್ಥನೆ ಮಾಡುತ್ತಾ, ಗುರುಗಳೇ ನನಗಿರುವ ಬಡತನದ ಬಗ್ಗೆ ಚಿಂತೆ ಇಲ್ಲ, ಆದರೆ ನನ್ನ ಮಗನ ಮನಸ್ಸು ದೈವ ಚಿಂತನೆಯಲ್ಲಿ ಅವನ ಮನಸ್ಸು ತೊಡಗುವಂತೆ ಮಾಡಿರಿ ಎಂದು ಪ್ರಾರ್ಥಿಸಿದ. ಹುಡುಗನ ಹಣೆಯಲ್ಲಿ ವಿದ್ಯೆ ಬರೆದಿತ್ತೋ ಅಥವಾ ಬ್ರಾಹ್ಮಣನ ಪ್ರಾರ್ಥನೆಯಯು ಗುರುಗಳಿಗೆ ಮುಟ್ಟಿತೋ ಗೊತ್ತಿಲ್ಲ. ಅದೇ ದಿನ ರಾತ್ರಿ ಬಾಲಕನ ಕನಸಿನಲ್ಲಿ ರಾಘವೇಂದ್ರ ಸ್ವಾಮಿಗಳು ದರ್ಶನ ಕೊಟ್ಟು, ಮಗು ನಿನಗೆ ಜಗತ್ತಿನಲ್ಲಿ ಎಲ್ಲಾ ಸಂಪತ್ತುಗಳು ಸಿಕ್ಕಿದರೂ, ಸಿಗದಿದ್ದರೂ, ಒಳಗಿನ ಶಾಂತಿ ಕೇವಲ ಮಂತ್ರ



ಜಪದಿಂದ ಮಾತ್ರ ನಿನಗೆ ಸಿಗುವುದು ಇದು ನಿನ್ನ ಹಿಂದಿನ ಜನ್ಮದ ಜ್ಞಾನದ ಪುಣ್ಯ ಫಲ ನಿನಗಿದೆ ಇದು ನಿನಗೆ ನೆನಪಿರಲಿ'' ಎಂದು ಹೇಳಿ ಆ ಹುಡುಗನಿಗೆ ಅರ್ಥವಾಗುವ ರೀತಿಯಲ್ಲಿ ಒಂದೇ ವಾಕ್ಯದಲ್ಲಿ ಗುರು ಮಂತ್ರವನ್ನು ಅವನ ಇಡಿಯಲ್ಲಿ ಉಪದೇಶ ಮಾಡಿದರು ಆ ಕ್ಷಣದಿಂದಲೇ ಬಾಲಕನ ಮನಸ್ಸು ಬದಲಾಯಿತು.

ಮರುದಿನದಿಂದಲೇ ಅವನ ಆಲೋಚನಾ ಶಕ್ತಿ ಧರ್ಮಮಾರ್ಗದತ್ತ ಹೊರಳಿತು.

ಬುದ್ಧಿ ಶಕ್ತಿಯಲ್ಲಿ ಜ್ಞಾನದಲ್ಲಿ ಪ್ರೌಢನಾಗಿ ಧಾರ್ಮಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡ. ತಂದೆ ಹೇಳಿಕೊಡುತ್ತಿದ್ದ ವೇದಾಧ್ಯಯನವನ್ನು ಶ್ರದ್ಧೆಯಿಂದ ಕಲಿಯುತ್ತಾ ಬಂದನು. ಕಾಲಕ್ರಮೇಣ ವೇದ ವೇದಾಂಗ ಪಂಡಿತರ ಸಾಲಿಗೆ ಸೇರಿದನು.

ಗುರುಗಳು ಬಾಲಕನ ಸಾಮರ್ಥ್ಯವನ್ನು ಗುರುತಿಸಿ ಅನುಗ್ರಹ ಮಾಡಿ, ಅವನ ಕನಸಿನಲ್ಲಿ ಭಕ್ತಿಯ ಬೀಜವನ್ನು ಬಿತ್ತುವ ಮೂಲಕ ಹುಡುಗನ ಜೀವನದ ದಿಕ್ಕನ್ನೇ ಬದಲಿಸಿದ ಮಹಾಮಹಿಮರು ಗುರುರಾಯರು.

ಹೀಗೆ ಇನ್ನೊಂದು ಅಪರೂಪದ ಪವಾಡ ನಡೆದಿತ್ತು. ಬಿಜಾಪುರದ ಸಮೀಪದ ಒಂದು ಹಳ್ಳಿ ರಾಘವೇಂದ್ರರು ತಮ್ಮ ಸಂಚಾರದ ಸಮಯದಲ್ಲಿ ಈ ಹಳ್ಳಿಗೆ ಬಂದರು. ಅಲ್ಲಿ ಕೆಲವು ಹೆಣ್ಣು ಮಕ್ಕಳು ಕುಳಿತು ಆಟವಾಡುತ್ತಿದ್ದರು. ಗುರುಗಳು ಅವುಗಳ ಸಮೀಪ ಬಂದು ಕೇಳಿದರು. ನೀವೆಲ್ಲಾ ಗುರುಕುಲದಲ್ಲಿ ಕಲಿಯುತ್ತಿದ್ದೀರಾ ಮಕ್ಕಳೇ ಎಂದು ಕೇಳಿದರು. ಮಕ್ಕಳು ಹೇಳಿದವು ಸ್ವಾಮಿಗಳೇ ನಮ್ಮಂತವರಿಗೆ ಓದಲು ಅವಕಾಶವಿಲ್ಲ ನಾವು ಶಾಸ್ತ್ರ- ಧರ್ಮವನ್ನು ಅರಿಯಲಾರೆವು ಎಂದರು. ಆ ಮಕ್ಕಳ ಶುದ್ಧವಾದ, ನಿಷ್ಕಲ್ಮಶವಾದ ನುಡಿಗೆ ಗುರುಗಳ ಹೃದಯ ಕರಗಿತು. ಅವರು ತಕ್ಷಣ ಹೇಳಿದರು, ಮಕ್ಕಳೇ ಚಿಂತಿಸಬೇಡಿ ನಾನು ನಿಮಗೆ ಇಂದು ಒಂದು ಮಂತ್ರವನ್ನು ಉಪದೇಶಿಸುವೆ

ಓಂ ವೆಂಕಟನಾಥಾಯ ವಿದ್ಮಹೇ
ಸಚ್ಚಿದಾನಂದಾಯ ಧೀಮಹಿ
ತನ್ನು ರಾಘವೇಂದ್ರ: ಪ್ರಚೋದಯಾತ್!!
ಓಂ ವೆಂಕಟನಾಥ ವಿದ್ಮಹೇ
ತಿಮ್ಮಣ್ಣ ಪುತ್ರಾಯ ಧೀಮಹಿ
ತನ್ನೋ ರಾಘವೇಂದ್ರ: ಪ್ರಚೋದಯಾತ್!!
ಓಂ ಪ್ರಹಲ್ಲಾದಾಯ ವಿದ್ಮಹೇ
ವ್ಯಾಸ ರಾಜಾಯ ಧಮಹಿ
ತನ್ನೋ ರಾಘವೇಂದ್ರ: ಪ್ರಚೋದಯಾತ್ !!

ನಿತ್ಯವೂ ಇದನ್ನು ಶ್ರದ್ಧೆ ಹಾಗೂ ಭಕ್ತಿಯಿಂದ ಜಪ ಮಾಡಿ ಮುಂದೆ ಎಲ್ಲಾ ತರಹದ ಜ್ಞಾನವು ನಿಮಗೆ ದೊರೆಯುತ್ತದೆ ಎಂದು ಮಂತ್ರವನ್ನು ಉಪದೇಶಿಸಿ ಹೊರಟರು.

ಅಕ್ಷರಭ್ಯಾಸ ಎಂದರೆ ಏನು ಎಂದು ಅರಿಯದ ಮಕ್ಕಳು ಗುರುಗಳು ಉಪದೇ ಶಿಸಿದ ಮಂತ್ರವನ್ನು ಗುರುಗಳು ಹೇಳಿದಂತೆ ಶ್ರದ್ಧೆ ಹಾಗೂ ಭಕ್ತಿಯಿಂದ ಜಪ ಮಾಡುತ್ತಾ



ಬಂದವು. ಅವುಗಳ ಜ್ಞಾನ ಗುರುಗಳ ಅನುಗ್ರಹದಿಂದ ತನ್ನಿಂದ ತಾನೇ ಅಭಿವೃದ್ಧಿಯಾಗುತ್ತಾ ಬಂದಿತು. ಮುಂದೆ ಈ ಮಕ್ಕಳೆಲ್ಲ ವಿದ್ಯಾವಂತರು- ಮಹಾನ್ ಜ್ಞಾನಿಗಳು ಆದರು. ಗುಂಪಿನಲ್ಲಿದ್ದ ಒಬ್ಬ ಹುಡುಗಿ ಎಷ್ಟು ಜ್ಞಾನಿಯಾಗಿದ್ದಳು ಎಂದರೆ ಆಕೆಯ ಸುಮಾರು 80 ವರ್ಷಗಳ ನಂತರವೂ ಶತಾವಧಾನಿಯಾಗಿ ವೇದ ಶಾಸ್ತ್ರ ವಾಂಙ್ಮಯಳಾಗಿ ಜನಮನದಲ್ಲಿ ಅಚ್ಚಳಿಯದೆ ಉಳಿದಳು. ಇದೆಲ್ಲ ವೂ ಸಾಧ್ಯವಾಗಿದ್ದು ಗುರುಗಳ ಆಶೀರ್ವಾದದಿಂದ ನಾನು ಗುರುಗಳಿಂದ ಜ್ಞಾನ ಪಡೆದೆ ಎಂದು ಹೇಳುತ್ತಿದ್ದ ಹುಡುಗಿಯ ಹೆಸರು ದಾಖಲಾಗಿದೆ ಎನ್ನುತ್ತಾರೆ.

ಗುರುಗಳ ದೃಷ್ಟಿಯಲ್ಲಿ ವಿದ್ಯೆಯನ್ನು ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಎಲ್ಲರೂ ಕಲಿಯುವ ಸ್ವಾತಂತ್ರ್ಯವಿದೆ ಎಂದು ತೋರಿಸಿಕೊಟ್ಟರು. ಅವರು ಉಪದೇಶಿಸಿದ ಸರಳವಾದ ಒಂದು ಮಂತ್ರೋಪದೇಶದಿಂದಲೇ ಅಕ್ಷರ ಜ್ಞಾನವಿಲ್ಲದ ಮಕ್ಕಳು ಮೇಧಾವಿಗಳಾದರು.

ಇನ್ನೊಂದು ಅದ್ಭುತ ಪವಾಡ:- ಅದು ಮೈಸೂರಿನ ಸಮೀಪ ನಡೆದ ಘಟನೆ. ಒಮ್ಮೆ ರಾಘವೇಂದ್ರ ಗುರುಗಳು ಸಂಚಾರ ಮಾಡುತ್ತಿದ್ದಾಗ ಒಂದು ಮನೆಯ ಮುಂದೆ ದಾರಿ ಮಧ್ಯದಲ್ಲಿ ಒಂದು ಶವ ಇಡಲಾಗಿತ್ತು. ಕಾರಣಾಂತರದಿಂದ ಅದನ್ನು ಮುಟ್ಟಲು ಜನರು ಹಿಂದೇಟು ಹಾಕಿದ್ದರು. ಹಾಗಂತ ಆ ಶವ ದಾರಿ ಮಧ್ಯದಲ್ಲಿದ್ದರೆ ಅದನ್ನು ದಾಟಿ ಮುಂದೆ ಹೋಗುವಂತಿಲ್ಲ. ಹೀಗಾಗಿ ಜನಗಳು ಏನು ಮಾಡಲು ತೋಚದೆ ಚಿಂತಿಸುತ್ತಿದ್ದರು. ಇದನ್ನೆಲ್ಲ ಗಮನಿಸಿದ ಗುರುಗಳು ತಮ್ಮ ಶಿಷ್ಯನನ್ನು ಕರೆದು ಹೇಳಿದರು. ನೋಡು ಅಲ್ಲಿ ಮಲಗಿದ ಆ ವ್ಯಕ್ತಿ ಸತ್ತಿಲ್ಲ ಅವನ ಕಿವಿಯಲ್ಲಿ ನಾನು ಹೇಳಿಕೊಡುವ ಮಂತ್ರ ಹೇಳಿ ಬಾಯಿ ಬಳಿ ಉಫ್ ಎಂದು ಊದು ಎಂದರು. ಗುರುಗಳು ಹೇಳಿದಂತೆ ಅವನ ಕಿವಿಯಲ್ಲಿ ಪ್ರಾಣಾಯಾಮದ ಗುಪ್ತ ಮಂತ್ರವನ್ನು ಹೇಳಿ, ಶವದ ಬಾಯಿ ಮೇಲೆ ಉಫ್ ಎಂದು ಜೋರಾಗಿ ಊದಿದ. ಇಷ್ಟೇ ತಕ್ಷಣ ಶವದ ಕೈಕಾಲು ಅಲುಗಾಡಿತು. ಸ್ವಲ್ಪ ಹೊತ್ತಿಗೆ ಶವವಾಗಿ ಮಲಗಿದ್ದವನು ದೊಡ್ಡದಾಗಿ ಕಣ್ಣು ಬಿಟ್ಟನು. ಝುಝುಝು ಕಣ್ಣು ಬಿಟ್ಟದ್ದನ್ನು ನೋಡಿ ಜನರು ಭಯಭೀತರಾಗಿ ಚದುರಿದರು.

ಗುರುಗಳು ಯಾರು ಗಾಬರಿಯಾಗಬೇಡಿ ಅವನು ಸತ್ತಿರಲಿಲ್ಲ ಎಂದು ಹೇಳಿ ಆಶೀರ್ವದಿಸಿ ಮುನ್ನಡೆದರು. ಅವನು ಬದುಕಿದ್ದರೂ ಸತ್ತನೆಂದು ಹೊರಗೆ ಮಲಗಿಸಿದ್ದರು. ಆದರೆ ಅವನಿಗೆ ಹೃದಯಘಾತವಾಗಿತ್ತು. ಇದರಿಂದ ಏಳು ಗುರುಗಳು ತಮ್ಮ ಯೋಗ ಶಕ್ತಿ ಮತ್ತು ಜ್ಞಾನದಿಂದ ಶವವಾಗಿ ಮಲಗಿದ್ದವನು ದೇಹದಲ್ಲಿ ಚೈತನ್ಯ ಮೂಡಿಸಿ ಬದುಕಿದರು. ನಂತರದ ದಿನಗಳಲ್ಲಿ ಅವನು ಸ್ವಾಮಿಗಳ ಶಿಷ್ಯರಲ್ಲಿ ಪ್ರೀತಿ ಪಾತ್ರ ಶಿಷ್ಯನಾದನು.

ಶ್ರೀ ರಾಘವೇಂದ್ರ ಗುರುಗಳು ವಿದ್ಯಾದಾತರು ಜೀವದಾತರು ಆಗಿದ್ದರು. ಪ್ರಾಣ ಹೋಗುವ ಕಾಲದಲ್ಲಿ ಅವರ ಪವಾಡಗಳು ನಿತ್ಯ ಭಕ್ತರಿಗೆ ಮಾರ್ಗದರ್ಶನವಾಗಿದೆ.

ಯಾರು ಶುದ್ಧ ಭಕ್ತಿಯಿಂದ ಗುರುಗಳನ್ನು ಆರಾಧಿಸಿ ಪ್ರಾರ್ಥಿಸುತ್ತಾರೋ ಅವರ ಪ್ರಾರ್ಥನೆಗೆ ಗುರುಗಳು ತಕ್ಷಣ ಸ್ಪಂದಿಸುತ್ತಾರೆ. ಇದೇ ಕಾರಣಕ್ಕೆ ರಾಘವೇಂದ್ರರನ್ನು ಭಕ್ತರ ಮೊರೆ ಆಲಿಸುವ ಗುರುವರ್ಯರು ಹಾಗೂ ಭಕ್ತರ ಭಕ್ತಿಗೆ ಬಹಳ ಬೇಗ ಒಲಿದು ಅವರ ಸಂಕಷ್ಟವನ್ನು ಪರಿಹರಿಸುವ ಕರುಣಾ ಸಾಗರರೇ ಎಂದು ಜನಮನದಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ.

ಶ್ರೀ ರಾಘವೇಂದ್ರ ಸ್ವಾಮಿಗಳು ಕೇವಲ ಮಠದ ತೇಜೋಮಯ ಗುರುಗಳು ಹಾಗೆ ಅವರು ಅಪಾರ ಭಕ್ತಿಯ ಪ್ರತಿರೂಪ. ಅವರ ಪಾದ ಕಮಲಗಳಲ್ಲಿ ತಲೆಬಾಗಿ ಪ್ರಾರ್ಥಿಸಿದ ಭಕ್ತರಿಗೆ ಅವರು ಧೈರ್ಯ, ಶಾಂತಿ ಮತ್ತು ಸಂಕಟ ಪರಿಹಾರ ಎಂಬ ಮೂರು ಅಮೂಲ್ಯವಾದ ವರಗಳನ್ನು ನೀಡುತ್ತಾರೆ. ನಮ್ಮ ನಂಬಿಕೆ ಪ್ರಬಲವಾದಾ ಗ ಅಜ್ಞಾತ ಶಕ್ತಿ ನಮ್ಮ ಬದುಕಿನಲ್ಲಿ ದಿವ್ಯತೆಯನ್ನು ತುಂಬುತ್ತದೆ ಗುರುರಾಯರ ಕೃಪಾ ದೃಷ್ಟಿ ದೊರೆತರೆ ನಮ್ಮ ಬದುಕು ಬಂಗಾರವಾಗುತ್ತದೆ.

## ಹಸಿರು ಮನೆಯ ಪರಿಣಾಮ

ಕಳೆದ ವಾರ ಹಸಿರು ಮನೆಯ ಪರಿಣಾಮದ ಬಗ್ಗೆ ಮಾತನಾಡುತ್ತಿದ್ದೆವು. ನಾವು ಓದಿ ಓದಿ, ಕೇಳಿ ಕೇಳಿ ಹಸಿರು ಮನೆಯ ಪರಿಣಾಮ ನಮಗೆ ಮಾರಕ ಎಂದೇ ಭಾವಿಸಿದ್ದೇವೆ. ಆದರೆ ಹಸಿರುಮನೆಯ ಪರಿಣಾಮ ಇಲ್ಲದೇ ಇದ್ದಿದ್ದರೆ ಭೂಮಂಡಲದ ಸರಾಸರಿ ಉಷ್ಣತೆ -18 ಇರುತ್ತಿತ್ತು. ಭೂಮಿಯ ಮೇಲೆ ಬದುಕು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ನೋಡಿದ್ದೇವೆ. ಈ ಹಸಿರುಮನೆಯ ಪರಿಣಾಮವನ್ನು ನಾವು ಎಲ್ಲಿ ಎಲ್ಲಿ ಬಳಸುತ್ತೇವೆ ಎಂಬುದನ್ನು ನೋಡೋಣ.

ನೀವು ಸೋಲಾರ್ ಕುಕ್ಕರ್ ಗಳನ್ನು ಬಳಸಿದ್ದೀರಾ ಅಥವಾ ಬಳಸುತ್ತಿದ್ದೀರಾ? ನಿಜವಾಗಿ ನಿಮಗೆ ಭೂಮಿ ಬಿಸಿಯಾಗುವ ಬಗ್ಗೆ ನೈಜ ಕಾಳಜಿ ಇದ್ದರೆ ನೀವು ಸೋಲಾರ್ ಕುಕ್ಕರ್ ಅನ್ನು ಬಳಸುತ್ತಿದ್ದಿರೇನೋ. ಇದು ಒಳ ಮೇಲ್ಮೈಗೆ ಕಪ್ಪು ಬಣ್ಣ ಬಳಿದ ಒಂದು ಮರದ ಪೆಟ್ಟಿಗೆ. ಇದಕ್ಕೊಂದು ಗಾಜಿನ ಮುಚ್ಚಳವಿರುತ್ತದೆ ಮತ್ತು ಒಳಗೆ ಬೆಳಕನ್ನು ಪ್ರತಿಫಲಿಸಲು ಒಂದು ಕನ್ನಡಿ ಇರುತ್ತದೆ. ಇದರಲ್ಲಿ ಬೇಯಿಸಬೇಕಾದ ವಸ್ತುಗಳನ್ನು ಕಪ್ಪು ಪಾತ್ರೆಗಳಲ್ಲಿ ಅಗತ್ಯವಾದಷ್ಟು ನೀರು ಹಾಕಿ ಪೆಟ್ಟಿಗೆಯೊಳಗಿಟ್ಟು ಗಾಜಿನ ಹಲಗೆಯನ್ನು ಮುಚ್ಚಿ ಬಿಸಿಲಿನಲ್ಲಿ ಇಡುತ್ತೇವೆ.

ಇದರ ಒಳಗೆ ನೇರವಾಗಿ ಬಿಸಿಲು ಬೀಳುವುದು ಮಾತ್ರವಲ್ಲ ಜೋಡಿಸಲಾದ ಕನ್ನಡಿ ಹೆಚ್ಚುವರಿ ಬೆಳಕನ್ನು ಪ್ರತಿಫಲಿಸುತ್ತದೆ. ಇದರೊಳಗಿನ ಕಪ್ಪು ಬಣ್ಣ ಶಾಖ ವಿಕಿರಣಗಳನ್ನು ಸುಲಭವಾಗಿ ಹೀರುತ್ತದೆ. ಇನ್ನು ಗಾಜಿನ ಮುಚ್ಚಳ ಹೊರಗೆ ತಪ್ಪಿಸಿಕೊಂಡು ಹೋಗುವ ಶಾಖವನ್ನು ಒಳಗೆ ಬಂಧಿಸಿ ಉಷ್ಣತೆ ಮತ್ತಷ್ಟು ಏರಿ ಒಳಗಿನ ಆಹಾರವನ್ನು ಬೇಯಿಸುತ್ತದೆ. ಮರದ ಪೆಟ್ಟಿಗೆ ಶಾಖ ನಿರೋಧಕವಾದುದರಿಂದ ಬಿಸಿ ಹೊರ ಹೋಗುವುದಿಲ್ಲ. ಯಾವುದೇ ಮಾಲಿನ್ಯವಿಲ್ಲ ಯಾವುದೇ ಶಾಖ ಉತ್ಸರ್ಜನೆ ಇಲ್ಲ. ಇನ್ನೊಂದು ನಿಮ್ಮ ಮನೆಯ ಸೌರ ನೀರು ಕಾಯಿಸುವ ವ್ಯವಸ್ಥೆ ಕೂಡಾ ಕೆಲಸ ಮಾಡುವುದು ಕೂಡಾ ಹಸಿರುಮನೆಯ ಪರಿಣಾಮವೇ. ಮೊದಲು ಗಾಜಿನ ಪೆಟ್ಟಿಗೆಯ ಒಳಗೆ ನೀರು ತುಂಬಿದ ತಾಮ್ರದ ನಳಿಕೆಗಳನ್ನು ಬಳಸಲಾಗುತ್ತಿತ್ತು. ಈಗ ನೇರವಾಗಿ ಗಾಜಿನ ನಳಿಕೆಗಳನ್ನೇ ಬಳಸಲಾಗುತ್ತದೆ. ಈ ಗಾಜಿನ ನಳಿಕೆಯ ಒಳಗಿನ ಕಪ್ಪು ಬಣ್ಣ ಶಾಖವನ್ನು ಸುಲಭವಾಗಿ ಹೀರುತ್ತದೆ ಮತ್ತು ಗಾಜು ಹಸಿರುಮನೆಯ ಕಾರಣದಿಂದ ಶಾಖ ತಪ್ಪಿಸಿಕೊಂಡು ಹೋಗಲು ಬಿಡದೇ ನೀರನ್ನು ಸುಮಾರು 80 ವರೆಗೆ ಕಾಯಿಸುತ್ತದೆ.

ನೀವು ಬಹಳ ದಿನ ಮನೆ ಬಿಟ್ಟು ಹೋಗುವುದಾದರೆ ಅಥವಾ ನಿಮ್ಮ ಮೇಲ್ಸ್ಥರದ ಟ್ಯಾಂಕ್ ಇಲ್ಲದೇ ಇರುವುದಾದರೆ ನೀವು ಗಾಜಿನ ಟ್ಯೂಬ್ ಗಳನ್ನು ಮುಚ್ಚಿ ಇಡಬೇಕಾಗುತ್ತದೆ. ಏಕೆಂದರೆ ಹಸಿರುಮನೆಯ ಪರಿಣಾಮದಿಂದ ಏರುವ ಉಷ್ಣತೆ ನಿಮ್ಮ ಗಾಜಿನ ಕೊಳವೆಗಳು ಒಡೆಯುವಂತೆ ಮಾಡುತ್ತದೆ. ಇಲ್ಲಿ ಕೂಡಾ ಯಾವುದೇ ಮಾಲಿನ್ಯವಿಲ್ಲ ಯಾವುದೇ ಶಾಖದ ಉತ್ಸರ್ಜನೆ ಇಲ್ಲ. ಇದು ಭೂ ವಾತಾವರಣದ ಉಷ್ಣತೆ ಏರಲು ಬಿಡುವುದಿಲ್ಲ. ಯಾರು ಹೇಳಿದರು ನಿಮಗೆ ಹಸಿರುಮನೆಯ ಪರಿಣಾಮ ಭೂಮಿಯ ತಾಪವನ್ನು ಏರಿಸುತ್ತದೆ ಎಂದು?

- ದಿವಾಕರ ಶೆಟ್ಟಿ ಎಚ್, ಮಂಗಳೂರು

# ವಿಶ್ವ ಪರ್ಯಟನೆಯಲ್ಲೇ ಜೀವತೆತ್ತ ಮಗೆಲ್ಲನ್

**ಇಂದು** ಪ್ರಪಂಚ ತುಂಬಾ ಕಿರಿದಾಗಿದೆ ಎಂದು ಎಲ್ಲರಿಗೂ ಅನಿಸುತ್ತದೆ. ಏಕೆಂದರೆ ಪ್ರಪಂಚದ ಯಾವುದೇ ಭಾಗಕ್ಕಾದರೂ ದಿನ ಕಳೆಯುವಷ್ಟರಲ್ಲಿ ಹೋಗಿ ತಲುಪಬಹುದಾದ ಸಂಚಾರ ವ್ಯವಸ್ಥೆ ಲಭ್ಯವಿದೆ. ಆದರೆ ನಾಲ್ಕೈದು ಶತಮಾನಗಳ ಹಿಂದೆ ಈ ರೀತಿಯ ಸೌಲಭ್ಯಗಳು ಇರಲಿಲ್ಲ. ಭೂಮಿಯ ಒಂದು ಭಾಗದಲ್ಲಿದ್ದ ಜನರಿಗೆ ಮತ್ತೊಂದು ಭಾಗದಲ್ಲಿ ಏನಿದೆ? ಅಲ್ಲಿ ಭೂಭಾಗವಿದೆಯೇ? ಸಮುದ್ರದಿಂದಲೇ ಕೂಡಿದೆಯೇ? ಚಿತ್ರ ವಿಚಿತ್ರ ಪ್ರಾಣಿಗಳು ಇವೆಯೇ? ಎಂಬ ಹಲವಾರು ವಿಚಾರಗಳು ಗೊತ್ತೇ ಇರಲಿಲ್ಲ. ಆದರೆ ಪ್ರತಿಯೊಂದು ಕಡೆಯಲ್ಲಿ ಹುಚ್ಚು ಸಾಹಸಿಗಳು ಇದ್ದೇ ಇರುತ್ತಾರೆ. ಆಗ ಭೂ ಪ್ರದಕ್ಷಿಣೆಗೆ ಇದ್ದ ಏಕೈಕ ಮಾರ್ಗ ಎಂದರೆ ನೌಕಾಯಾನ. ನೌಕಾಯಾನದಲ್ಲಿ ಒದಗಿ ಬರುವ ಅಡಚಣೆಗಳು ನೂರಾರು. ಅವನ್ನೆಲ್ಲಾ ಮೆಟ್ಟಿ ನಿಂತು ಮೊದಲನೇ ಬಾರಿಗೆ ಇಡೀ ಭೂಮಿಯನ್ನು ಸುತ್ತಿದ ಓರ್ವ ಸಾಹಸಿ ನಾವಿಕನ ಬಗ್ಗೆ ನಾವಿಂದು ತಿಳಿದುಕೊಳ್ಳೋಣ.

ವ್ಯಾಪಾರದ ನೆಪದಲ್ಲಿ 1498ರಲ್ಲಿ ಭಾರತಕ್ಕೆ ದಾರಿ ಹುಡುಕಿಕೊಂಡು ಬಂದ ಪೋರ್ಚ್ ಗೀಸ್ ನಾವಿಕ ವಾಸ್ಕೋ ಡಿ ಗಾಮ ಆಗಲಿ, ಅಮೇರಿಕಾ ಖಂಡದ ಕೆಲವು ದ್ವೀಪಗಳನ್ನು 1492ರಲ್ಲಿ ಹುಡುಕಿದ ಕ್ರಿಸ್ಟೋಫರ್ ಕೊಲಂಬಸ್ ಆಗಲಿ ನಂತರದ ದಿನಗಳಲ್ಲಿ ಅಮೇರಿಕಾ ಎನ್ನುವುದು ಏಷ್ಯಾ ಖಂಡಕ್ಕಿಂತ ಬೇರೆ ಆಗಿರುವ ಪ್ರತ್ಯೇಖ ಖಂಡ ಎಂದು ತಿಳಿಸಿದ ಇಟಾಲಿಯನ್ ನಾವಿಕ ಅಮೇರಿಗೊ ವೆಸ್ಪುಚ್ಚಿ (ವೆಸ್ಪುಸ್ಸಿ ) ಯಾಗಲಿ ಪ್ರಪಂಚದ ಎಲ್ಲಾ ಭಾಗಗಳನ್ನು ತಲುಪಲು ಸಾಧ್ಯವಾಗಲಿಲ್ಲ. ಇದನ್ನು ಸಾಧಿಸಿದ್ದು ಮತ್ತು ಅದೇ ವಿಶ್ವ ಪರ್ಯಟನೆಯಲ್ಲೇ ತನ್ನ ಜೀವ ತೆತ್ತ ಸಾಹಸಿ ನಾವಿಕ ಫರ್ಡಿನಂಡ್ ಮಗೆಲ್ಲನ್ ( ) ಅಥವಾ



ಮಗೆಲನ್. 12 ರಿಂದ 16ನೇ ಶತಮಾನದ ಸಮಯದಲ್ಲಿ ಹಡಗು ಹತ್ತಿ ಹೋಗುವುದೇ ಹೊಸ ಭೂಭಾಗ ಅಥವಾ ಬೇರೆ ದೇಶಗಳನ್ನು ಹುಡುಕಲು ಇದ್ದ ಏಕೈಕ ದಾರಿ. ಹುಡುಕಲು ಹೋದವರಿಗೆ ಭೂಭಾಗ್ಯವೂ ಸಿಕ್ಕಬಹುದು, ಸಿಗದೆಯೂ ಇರಬಹುದು. ಸಮುದ್ರದಲ್ಲಿ ಏಳುವ ಭೀಕರ ಬಿರುಗಾಳಿಗೆ ಸಿಕ್ಕಿ, ಆಹಾರವಿಲ್ಲದೇ ಸತ್ತವರೂ ಅಸಂಖ್ಯಾತ ಮಂದಿ ಇದ್ದಾರೆ. ಹಡಗಿಗೆ ಹತ್ತಿದ ವ್ಯಕ್ತಿ ಮರಳಿ ಮತ್ತೆ ಬರುವನೋ ಎನ್ನುವುದು ಆ ಕಾಲದಲ್ಲಿ ಖಾತ್ರಿ ಇರಲಿಲ್ಲ. ಆದರೆ ಆಗಲೂ ಸಾಹಸಿಗಳಿಗೆ ಕೊರತೆ ಇರಲಿಲ್ಲ. ಅಂತಹ ಓರ್ವ ಹುಚ್ಚು ಸಾಹಸಿಯೇ ಫರ್ಡಿನಂಡ್ ಮಗೆಲ್ಲನ್.

ಮಗೆಲ್ಲನ್ ಪೋರ್ಚ್ ಗೀಸ್ ರಾಜ ಒಂದನೇ ಮ್ಯಾನ್ಯುಯೆಲ್ ನ ಆಪ್ತ ಆಸ್ಥಾನಿಕ ನಾವಿಕನಾಗಿದ್ದ. 1495ರಲ್ಲಿ ಮ್ಯಾನ್ಯುಯೆಲ್ ಜೊತೆ ಸೇರಿಕೊಂಡು ಈತ 1511ರಲ್ಲಿ ಮಲಕ್ಕಾ ದ್ವೀಪವನ್ನು ವಶಪಡಿಸಿಕೊಳ್ಳುತ್ತಾನೆ. ಆ ಬಳಿಕ ಈತನ ಹೆಸರು ಪ್ರಸಿದ್ಧಿಗೆ ಬರುತ್ತದೆ. ಆದರೆ ಕೆಲವೇ ವರ್ಷಗಳಲ್ಲಿ ರಾಜನ ಜೊತೆ ಭಿನ್ನಾಭಿಪ್ರಾಯ ಮೂಡಿ ಮಗೆಲ್ಲನ್ ಸ್ಪೇನ್‌ನ ರಾಜನ ಜೊತೆ 1517ರಲ್ಲಿ ಸ್ನೇಹ ಮಾಡಿಕೊಳ್ಳುತ್ತಾನೆ. ಸ್ಪೇನ್ ರಾಜನ ಸಹಕಾರ ದೊಂದಿಗೆ 1519ರಲ್ಲಿ ಐದು ಹಡಗುಗಳೊಂದಿಗೆ ವಿಶ್ವ ಪರ್ಯಟನೆಗೆ ಹೊರಡುತ್ತಾನೆ.

ಈ ಪ್ರಯಾಣವು ಮಗೆಲ್ಲನ್‌ನ ಹಿಂದಿನ ಪ್ರಯಾಣಗಳಂತೆ ಆರಾಮದಾಯಕವಾಗಿರಲಿಲ್ಲ. ಕಡಲಿನ ಹವಾಮಾನವೂ ಪ್ರಯಾಣಕ್ಕೆ ಸೂಕ್ತವಾಗಿರಲಿಲ್ಲ. ಸಮುದ್ರದ ನೀರಿನ ಹರಿವು ಅವರ ಪ್ರಯಾಣದ ವಿರುದ್ಧ ದಿಕ್ಕಿನಲ್ಲಿತ್ತು. ಸಿಬ್ಬಂದಿಗಳೂ ಮಗೆಲ್ಲನ್ ಗೆ ಪ್ರೋತ್ಸಾಹ ನೀಡದೇ ಆತನ ವಿರುದ್ಧವೇ ದಂಗೆ ಎದ್ದರು. ಆದರೂ ತನ್ನ ಚಾಣಾಕ್ಷತನದಿಂದ ನಿಭಾಯಿಸಿ ಹಾಗೂ ಹೀಗೂ ಒಂದು ಹೊಸ ಭೂಭಾಗ ಸೇರಿಕೊಳ್ಳುತ್ತಾನೆ. ಅದುವೇ ಇಂದಿನ ದಕ್ಷಿಣ ಅಮೇರಿಕಾ. ಆತ ಸಾಗಿ ಬಂದ ಸಮುದ್ರಕ್ಕೆ ಆಗ ಹೆಸರು ಇರಲಿಲ್ಲ. ಮಗೆಲ್ಲನ್ ಆ ಸಮುದ್ರಕ್ಕೆ ಫೆಸಿಫಿಕ್ ಮಹಾ ಸಾಗರ ಎಂದು ನಾಮಕರಣ ಮಾಡುತ್ತಾನೆ. ಆತ ಕಂಡು ಹಿಡಿದ ಈ ಸಮುದ್ರ ಮಾರ್ಗಕ್ಕೆ (ಜಲಸಂಧಿ) ನಂತರದ ದಿನಗಳಲ್ಲಿ ಈತನ ಹೆಸರನ್ನೇ ನೀಡಲಾಯಿತು. ಅದುವೇ ಮಗೆಲ್ಲನ್ ಜಲಸಂಧಿ.

ಅಲ್ಲಿಂದ ಮರಳಿ ಸ್ಪೇನ್‌ಗೆ ಹೊರಟಾಗ ಅವರ ಬಳಿ ಉಳಿದದ್ದು ಮೂರು ಹಡಗುಗಳು ಮಾತ್ರ. ಆದರೆ ಫೆಸಿಫಿಕ್ ಮಹಾ ಸಾಗರದಲ್ಲಿ ಪರ್ಯಟನೆ ಮಾಡುವಾಗ ಪ್ರತಿಕೂಲ ಹವಾಮಾನದ ಕಾರಣ ಹಲವಾರು ದಿನಗಳು ಉರುಳಿ ಅವರ ಬಳಿ ಇದ್ದ ಆಹಾರ ಸಾಮಾಗ್ರಿಗಳು ಖಾಲಿಯಾಗತೊಡಗಿದವು. ಮಗೆಲ್ಲನ್ ಸೇರಿದಂತೆ ಎಲ್ಲಾ ಸಿಬ್ಬಂದಿಗಳು ಹಸಿವಿನಿಂದ ನರಳತೊಡಗಿದರು. ಕೆಲವು ಸಿಬ್ಬಂದಿಗಳು ಹಸಿವಿನಿಂದ ಸತ್ತೇ ಹೋದರು. ಆದರೂ ಸುಮಾರು ಹದಿನಾಲ್ಕು ವಾರಗಳ ಪ್ರಯಾಣ ಮಾಡಿ ಕೊನೆಗೆ ಪಶ್ಚಿಮ ಫೆಸಿಫಿಕ್‌ನ ಬಳಿಯಿದ್ದ ಒಂದು ದ್ವೀಪವನ್ನು ತಲುಪಿದರು. ಅಲ್ಲಿ ಸ್ವಲ್ಪ ದಿನ ತಂಗಿದ ಮಗೆಲ್ಲನ್ ಮತ್ತು ಆತನ ತಂಡ ಪ್ರಯಾಣ ಮುಂದುವರೆಸಿ ಫಿಲಿಫೈನ್ಸ್ ತಲುಪಿದರು.

ಫಿಲಿಫೈನ್ಸ್ ನ ಸ್ಥಳೀಯ ನಾಯಕರ ಜೊತೆ ಎಪ್ರಿಲ್ 27, 1521ರಂದು ಗಲಾಟೆ ಮಾಡಿಕೊಂಡು ಸಣ್ಣ ಹೋರಾಟವಾಗಿ ಮಗೆಲ್ಲನ್ ದಾರುಣವಾಗಿ ಸಾವನ್ನಪ್ಪುತ್ತಾನೆ. ಮಗೆಲ್ಲನ್ ನ ಸಾವಿನ ಬಳಿಕ ಆತನ ಸಿಬ್ಬಂದಿಗಳು ಮತ್ತು ಹಡಗನ್ನು ಬಿಟ್ಟು ಕಳಿಸುತ್ತಾರೆ ಫಿಲಿಫೈನ್ಸ್ ನಾಯಕರು. ಕೊನೆಗೂ ಅವನ ಹಡಗು ಸೆಪ್ಟೆಂಬರ್ 1522ರಂದು ಸ್ಪೇನ್ ತಲುಪುತ್ತದೆ. ಸಾಹಸಿ ನಾವಿಕ ಮಗೆಲ್ಲನ್ ಸಾವಿಗೆ ಸ್ಪೇನ್ ಜನರು ಕಣ್ಣೀರಾಗುತ್ತಾರೆ. ಆತನ್ ಸಾಹಸ ಇಂದಿಗೂ ಎಲ್ಲಾ ನಾವಿಕರಿಗೆ ಸ್ಫೂರ್ತಿದಾಯಕ. ಮಗೆಲ್ಲನ್ ವಿಶ್ವವನ್ನು ಹಡಗಿನಲ್ಲಿ ಪ್ರದಕ್ಷಿಣೆ ಮಾಡಿದ ಮೊದಲ ವ್ಯಕ್ತಿ ಎಂಬ ಖ್ಯಾತಿಗೆ ಪಾತ್ರನಾಗುತ್ತಾನೆ. ಆದರೆ ಈ ಪರ್ಯಟನೆಯ ಸವಿಯನ್ನು ಅನುಭವಿಸಲು ಮಗೆಲ್ಲನ್ ಜೀವಂತವಾಗಿರಲಿಲ್ಲ. ಅದುವೇ ಕಟು ವಾಸ್ತವ. (ಆಧಾರ)

# ನೇಪಾಳ ಪ್ರವಾಹ: ಮೃತರ ಸಂಖ್ಯೆ 750ಕ್ಕೆ ಏರಿಕೆ

## 3 ಸಾವಿರಕ್ಕೂ ಅಧಿಕ ಜನರು ನಾಪತ್ತೆ । ಮುಂದುವರಿದ ಶೋಧ ಕಾರ್ಯ

• ಪ್ರಜೋದಯ ವರದಿ

**ಕಠ್ಮಂಡು:** ನೇಪಾಳ ಮತ್ತು ಟಿಬೆಟ್ ಗಡಿ ಭಾಗದಲ್ಲಿ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ 750ಕ್ಕೆ ಏರಿಕೆಯಾಗಿದೆ.

320 ಭಾರತೀಯರು ಸೇರಿ 3,000ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದಾರೆಂದು ವರದಿಯಾಗಿದೆ. ರಕ್ಷಣಾ ತಂಡಗಳು ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸುತ್ತಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಪ್ರವಾಹದ ಭೀತಿ ಕೊಂಚ ಮಟ್ಟಿಗೆ ತಗ್ಗಿದೆ. ಆದರೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿರುವ ಜನರ ಸ್ಥಿತಿ ಹೇಳತೀರದಾಗಿದೆ. ಅಗತ್ಯ ಮೂಲಸೌಕರ್ಯಗಳಿಲ್ಲದೆ, ಆಹಾರ, ಔಷಧಿಗಳಿಗಾಗಿ ಪರದಾಡುತ್ತಿದ್ದಾರೆಂದು ಮಾಧ್ಯಮಗಳು ವರದಿ ಮಾಡಿವೆ.

ಕಠ್ಮಂಡುವಿನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಸಹಾಯವಾಣಿಯನ್ನು ಆರಂಭಿಸಿದೆ. ಜನರು +977 985 131 6807 ಅಥವಾ +977 970 910 7500 ಈ ದೂರವಾಣಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ. ನೇಪಾಳದ ಭೋಟೆ ಕೋಶಿ ಮತ್ತು ತ್ರಿಶೂಲಿ ನದಿಯ ದಡದಲ್ಲಿರುವ ಗ್ರಾಮಗಳು ಹಾಗು ಪಟ್ಟಣಗಳ ಮೇಲೆ ಬುಧವಾರ (ಆ. 26) ಸುನಾಮಿಯಂತೆ ಅಪ್ಪಳಿಸಿದ ಕೆಸರುಮಿಶ್ರಿತ ನೀರು ಹಲವಾರು ಕಟ್ಟಡಗಳು, ಮನೆಗಳನ್ನು ನುಂಗಿಹಾಕಿದೆ. ನೇಪಾಳದಲ್ಲಿ ಸಂಭವಿಸಿದ ದಿಢೀರ್ ಪ್ರವಾಹಕ್ಕೆ ಭೂಕಂಪ ಕಾರಣವಲ್ಲ, ದೊಡ್ಡ ಪ್ರಮಾಣದಲ್ಲಿ ಹಿಮಬಂಡೆಗಳು ಕುಸಿದು ಪ್ರವಾಹ ಉಂಟಾಗಿದೆ ಎಂದು ಅಮೇರಿಕಾದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (ಯುಎಸ್‌ಜಿಎಸ್) ಹೇಳಿದೆ.

**ಸಾವಿರಾರು ಮಕ್ಕಳ ಉಳಿಸಿದ ಶಿಕ್ಷಕ:** ನೇಪಾಳ ಪ್ರವಾಹದ ಸಂದರ್ಭ ಶಾಲೆಯೊಂದರ ಮುಖ್ಯ ಶಿಕ್ಷಕರ ಸಮಯ ಪ್ರಜ್ಞೆ ಸಾವಿರಾರು ಮಕ್ಕಳ ಜೀವ ಉಳಿಸಿದೆ. ನೇಪಾಳದ ತ್ರಿಶೂಲಿ ಕಣಿವೆಯಲ್ಲಿರುವ ತ್ರಿಭುವನ್ ತ್ರಿಶೂಲಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ರಾಜೇಂದ್ರ ದಾವಡಿ ಅವರಿಗೆ ಬುಧವಾರ (ಆ.26) ಬೆಳಿಗ್ಗೆ 9.20ರ ಸುಮಾರಿಗೆ ಸ್ನೇಹಿತರಿಂದ ಎಚ್ಚರಿಕೆಯ



ಸಂದೇಶ ಬಂದಿತ್ತು. ಹಠಾತ್ ಪ್ರವಾಹದಿಂದ ನದಿಯು ಉಕ್ಕೇರಿ ಸಮೀಪದ ಹಳ್ಳಿಗಳನ್ನು ಮುಳುಗಿಸಿದೆ ಎಂಬ ಮಾಹಿತಿ ಸಿಕ್ಕಿತ್ತು.

ಒಂದೆಡೆ ಮೂರು ಅಂತಸ್ತಿನ ಕಟ್ಟಡದಲ್ಲಿ 1,643 ಮಕ್ಕಳು. ಮತ್ತೊಂಡೆದೆ ಹೆಚ್ಚಾಗುತ್ತಿರುವ ಪ್ರವಾಹ ಸೇತುವೆ, ರಸ್ತೆಗಳನ್ನು ನುಂಗುತ್ತಾ ಬರುತ್ತಿದೆ. ಕೆಲವೇ ನಿಮಿಷಗಳಲ್ಲಿ ಶಾಲೆಗೂ ನುಗ್ಗುವ ಆತಂಕ ಇಂಗ್ಲಿಷ್ ಶಿಕ್ಷಕರೂ ಆಗಿರುವ 47 ವರ್ಷದ ದಾವಡಿಗೆ ಕಾಡಿತ್ತು. ಮಕ್ಕಳ ಸುರಕ್ಷತೆಯು ನನ್ನ ನಿರ್ಧಾರದ ಮೇಲೆ ನಿಂತಿದೆ ಎಂದು ಯೋಚಿಸಿದರು. ಆದರೂ, ಕಾಂಕ್ರಿಟ್‌ನಿಂದ ನಿರ್ಮಿಸಿದ ಕಟ್ಟಡ, ನದಿಯಿಂದ ಸುಮಾರು 60 ಮೀಟರ್ ಎತ್ತರದಲ್ಲಿದೆ. ಹಳ್ಳಿಯನ್ನು ಸಂಪರ್ಕಿಸುವ ಉಕ್ಕಿನ ಸೇತುವೆ ಶಾಲೆಯ ಮಟ್ಟಕ್ಕೇ ಇದೆ. ಹಾಗಾಗಿ, ಅಷ್ಟೇನೂ ಸಮಸ್ಯೆ ಆಗುವುದಿಲ್ಲ ಎಂದು ಭಾವಿಸಿದ್ದರು. ಆದರೆ, ರಿಸ್ಕ್ ತೆಗೆದುಕೊಳ್ಳುವುದು ಬೇಡ ಎಂದುಕೊಂಡ ಶಿಕ್ಷಕ, ಓಡಿಬಂದು ಶಾಲೆಯ ಘಂಟೆ ಬಾರಿಸಿದರು. ಕೂಡಲೇ ತರಗತಿ ತೆರವು ಮಾಡುವಂತೆ ಎಲ್ಲ ಶಿಕ್ಷಕರಿಗೂ ಸೂಚಿಸಿದರು.

ಶಾಲಾ ಬಸ್ ಚಾಲಕರಿಗೆ ಕರೆ ಮಾಡಿ, ತಕ್ಷಣ ತೆರಳುವಂತೆ ಸೂಚಿಸಿದರು. ಮಕ್ಕಳಿಗೆ ಅದಾಗಲೇ ಅಪಾಯದ ಅರಿವಾಗಿತ್ತು. ಓಡಿ ಓಡಿ ಎಂಬ ಮುಖ್ಯ ಶಿಕ್ಷಕರ ಧ್ವನಿ ಆಲಿಸಿದ ಮಕ್ಕಳು ನಡಿಗೆಯಲ್ಲೇ ಸೇತುವೆ ದಾಟಿದರು. ಅವರನ್ನು ಹಿಂಬಾಲಿಸಿದ ಶಿಕ್ಷಕರು, ಮಕ್ಕಳ ಸುರಕ್ಷತೆಗೆ ಕಟಿಬದ್ಧರಾಗಿದ್ದರು. ದೂರದ ಮರದಡಿ ನಿಂತಿದ್ದ ಮಕ್ಕಳು ಮೂಕಪ್ರೇಕ್ಷಕರಾಗಿ ದುರಂತವನ್ನು ವೀಕ್ಷಿಸಿದರು. ತಮ್ಮನ್ನು ರಕ್ಷಿಸಿದ ಶಿಕ್ಷಕನಿಗೆ ಕೃತಜ್ಞತೆ ಸಲ್ಲಿಸಿದರು.

ಶಿಕ್ಷಕ ದಾವಡಿ ಅವರ ಸಮಯ ಪ್ರಜ್ಞೆ 1,643 ಮಕ್ಕಳು ಹಾಗು ಬೋಧಕ ಸಿಬ್ಬಂದಿಯ ಪ್ರಾಣ ಉಳಿಸಿತ್ತು. ಆದರೆ, 32 ವರ್ಷದ ಶಿಕ್ಷಕ ಸ್ಯಾಂಟೋಸ್ ಪರಿಯಾರ್, ಉಪಾಹಾರ ತಯಾರಿಸಲು ನದಿಯ ಪಕ್ಕದ ಬಾಡಿಗೆ ಮನೆಗೆ ತೆರಳಿದ್ದರಿಂದ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದರು. ಶಾಲೆಯ ಸಹಾಯಕ ಸಿಬ್ಬಂದಿ ಸುಲ್ತಾನ್ ಲಾಮಾ ಎಂಬವವರು ಸಹ ಶಾಲೆಯ ಬಾಗಿಲು ಮುಚ್ಚಲು ಬಂದು ಪ್ರವಾಹಕ್ಕೆ ಸಿಲುಕಿ ಪ್ರಾಣ ತೆತ್ತಿದ್ದರು.

# ಕರ್ಮಭೂಮಿಗೆ ನಿಷ್ಠರಾಗಿರಿ: ಮೋಹನ್ ಭಾಗವತ್

• ಪ್ರಜೋದಯ ವರದಿ

**ಅಮೇರಿಕ:** ನೀವು ಕೆಲಸ ಮಾಡುವ ಸ್ಥಳಕ್ಕೆ ಸಂಪೂರ್ಣ ನಿಷ್ಠರಾಗಿರಬೇಕು. ನೀವು ಅಮೆರಿಕದಲ್ಲಿ ವಾಸಿಸುತ್ತಿದ್ದೀರಿ, ಅಲ್ಲಿಯೇ ಸಂಪಾದಿಸುತ್ತಿದ್ದೀರಿ. ಹಾಗಾಗಿ ನೀವು ಅಮೆರಿಕನ್ನರಾಗಿದ್ದು, ಆ ದೇಶಕ್ಕೆ ಪ್ರಾಮಾಣಿಕರಾಗಿರಬೇಕು. ನಿಮ್ಮ ಕರ್ಮಭೂಮಿಗೆ ನೀವು ನಿಷ್ಠರಾಗಿರುವುದು ನಿಮ್ಮ ಮೊದಲ ಕರ್ತವ್ಯ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು ಕರೆ ನೀಡಿದರು.




ನ್ಯೂಯಾರ್ಕ್ ನಗರದ ಐತಿಹಾಸಿಕ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ನಡೆದ ಅಮೆರಿಕನ್ ಹಿಂದೂಸ್ ಫಾರ್ ಎಂಗೇಜ್‌ಮೆಂಟ್ ಅಂಡ್ ಡೈಲಾಗ್ ವೇದಿಕೆ ಆಯೋಜಿಸಿದ್ದ 'ಯೂನಿವರ್ಸಲ್ ಒನ್ನೆಸ್ ಸೆಲೆಬ್ರೇಷನ್ಸ' ಕಾರ್ಯಕ್ರಮದಲ್ಲಿ ಭಾರತೀಯ ವಲಸಿಗರನ್ನ ಉದ್ದೇಶಿಸಿ ಮಹತ್ವದ ಸಂದೇಶ ರವಾನಿಸಿದರು.

ಆರ್‌ಎಸ್‌ಎಸ್ ಶತಮಾನೋತ್ಸವದ ಅಂಗವಾಗಿ ಅಮೆರಿಕ, ಕೆನಡಾ ಮತ್ತು ಬ್ರಿಟನ್ ಪ್ರವಾಸ ಕೈಗೊಂಡಿರುವ ಅವರು, ಮಾನವೀಯತೆ, ಧರ್ಮ, ಮತ್ತು ವಲಸಿಗರ ಕರ್ತವ್ಯದ ಬಗ್ಗೆ ಮಾತನಾಡಿದರು. ಅಮೆರಿಕದಲ್ಲಿ ನೆಲೆಸಿರುವ ಭಾರತೀಯರಿಗೆ ಕಿವಿಮಾತು ಹೇಳಿದ ಮೋಹನ್ ಭಾಗವತ್, ಪ್ರತಿಯೊಬ್ಬರೂ ತಮ್ಮ ಕರ್ಮಭೂಮಿ ಅಂದರೆ, ಭಾರತವು ನಿಮ್ಮ ಜನ್ಮ ಭೂಮಿ ಆಗಿರುವುದರಿಂದ, ಕರ್ಮ ಭೂಮಿಯ ಜವಾಬ್ದಾರಿಗಳನ್ನ ಪೂರೈಸಿದ ಬಳಿಕ ಜನ್ಮಭೂಮಿಗೆ ಕೊಡುಗೆ ನೀಡುವುದನ್ನು ನಿರೀಕ್ಷಿಸಲಾಗುತ್ತದೆ. ಅದು ಕಡ್ಡಾಯವಲ್ಲ, ಆದರೆ ನಿಮ್ಮ ಇಚ್ಛೆಯಿದ್ದರೆ ಖಂಡಿತವಾಗಿ ಮಾಡಬಹುದು ಎಂದು ತಿಳಿಸಿದರು.

**ಫೋರ್ಬ್ಸ್ ಪ್ರಭಾವಿ ಭಾರತೀಯರ ಪಟ್ಟಿಯಲ್ಲಿ ಕರುನಾಡಿನ ಕಂಪು:** ಟಾಪ್ 100ರಲ್ಲಿ ರಿಷಬ್ ಶೆಟ್ಟಿ ಸೇರಿ ಮೂವರಿಗೆ ಸ್ಥಾನ ವಿವಿಧತೆಯಲ್ಲಿ ಏಕತೆಯೇ ಭಾರತದ ಕಾರ್ಯಕ್ರಮದಲ್ಲಿ ವಿಶ್ವ ಏಕತೆಯ ಕುರಿತು ಮಾತನಾಡಿದ ಅವರು, ಅಮೆರಿಕವನ್ನು ಬಹುವಚನವಾದ ಎಂಬ ಪದದಿಂದ ಗುರುತಿಸಿದರೆ, ಭಾರತವನ್ನು ವಿವಿಧತೆಯಲ್ಲಿ ಏಕತೆ ಎಂದು ಕರೆಯಲಾಗುತ್ತದೆ ಎಂದರು.

ವಿವಿಧತೆಯಲ್ಲಿ ಏಕತೆಯೆಂಬುದು ಭಾರತದ ಡಿಎನ್‌ಎಯಲ್ಲೇ ಅಡಗಿದೆ. ಮನುಷ್ಯರ ನಡುವೆ ಭಿನ್ನಾಭಿಪ್ರಾಯಗಳು, ಜೀವನಶೈಲಿಯ ವ್ಯತ್ಯಾಸಗಳು ಸಹಜ. ಆದರೆ ನಮ್ಮೆಲ್ಲರನ್ನೂ ಬೆಸೆಯುವ ಒಂದು ಆಂತರಿಕ ಏಕತೆಯಿದೆ. ಆ ಏಕತೆಯನ್ನು ನಾವು ಆಚರಿಸಬೇಕು ಎಂದು ಅವರು ಹೇಳಿದರು.

ಧರ್ಮ ಎಂದರೆ ಕೇವಲ ಪೂಜೆ ಅಥವಾ ಆರಾಧನೆಯಲ್ಲ; ಅದು ಇಡೀ ಬ್ರಹ್ಮಾಂಡವನ್ನು ಹಿಡಿದಿಟ್ಟುಕೊಳ್ಳುವ, ಮನುಷ್ಯನ ಜೀವನವನ್ನು ಸಮತೋಲನದಲ್ಲಿಡುವ ಒಂದು ನಿಯಮ ಎಂದು ವಿವರಿಸಿದರು. ನಾವು ಎಷ್ಟು ಸಂಪಾದಿಸುತ್ತೇವೆ ಎನ್ನುವುದಕ್ಕಿಂತ, ಎಷ್ಟು ಹಂಚುತ್ತೇವೆ ಎಂಬುದು ಮುಖ್ಯ. ಭೌತಿಕ ಸಂಪತ್ತು ಎಂದಿಗೂ ಶಾಶ್ವತ ನೆಮ್ಮದಿಯನ್ನು ನೀಡಲಾರದು ಎಂದು ಹೇಳಿದರು.

ಒಳ್ಳೆಯದು ಮತ್ತು ಕೆಟ್ಟದ್ದನ್ನ ವಿವೇಚಿಸುವ ಶಕ್ತಿ ಮನುಷ್ಯನಿಗೆ ಮಾತ್ರ ಇದೆ. ನಾವು ತಪ್ಪು ದಾರಿಯಲ್ಲಿ ಯೋಚಿಸಿದರೆ, ಪ್ರಾಣಿಗಳ ಮಟ್ಟಕ್ಕೆ ಇಳಿಯುತ್ತೇವೆ ಎಂದು ಎಚ್ಚರಿಸಿದರು.

'ಹಸಿದ ಮನುಷ್ಯನ' ಉದಾಹರಣೆ ನೀಡುವ ಮೂಲಕ, ಮಾನವೀಯತೆ ಮತ್ತು ಸಹಾನುಭೂತಿಯ ಪ್ರಾಮುಖ್ಯತೆಯನ್ನು ಸಾರಿದರು. 61ಕ್ಕೂ ಹೆಚ್ಚು ಸಂಘಟನೆಗಳು ಕಾರ್ಯಕ್ರಮವನ್ನ ವಿರೋಧಿಸಿ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್ ಹೊರಗೆ ಪ್ರತಿಭಟನೆ ನಡೆಸಲು ಮುಂದಾಗಿದ್ದವು.

# ಸಕಲೇಶಪುರ, ಆಲೂರು, ಬೇಲೂರು ಬರಪೀಡಿತ ಪಟ್ಟಿಗೆ ಸೇರಿಸಿ

## ಜಿಲ್ಲಾ ಬೆಳೆಗಾರರ ಸಂಘದ ಅಧ್ಯಕ್ಷ ಮಂಜುನಾಥ್ ಶೆಟ್ಟಿ

• ಪ್ರಜೋದಯ ವರದಿ

**ಸಕಲೇಶಪುರ:** ಸಕಲೇಶಪುರ, ಆಲೂರು ಹಾಗೂ ಬೇಲೂರು ತಾಲ್ಲೂಕುಗಳನ್ನು ತಕ್ಷಣ ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರ್ಪಡೆಗೊಳಿಸಬೇಕು. ಇಲ್ಲವಾದಲ್ಲಿ ಮೂರು ತಾಲ್ಲೂಕುಗಳ ಬೆಳೆಗಾರರನ್ನು ಒಗ್ಗೂಡಿಸಿ ಹೋರಾಟ ನಡೆಸಲಾಗುವುದು ಎಂದು ಹಾಸನ ಜಿಲ್ಲಾ ಬೆಳೆಗಾರರ ಸಂಘದ ಅಧ್ಯಕ್ಷ ಮಂಜುನಾಥ್ ಶೆಟ್ಟಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.




ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಹಾಸನ ಜಿಲ್ಲೆಯ ಎಂಟು ತಾಲ್ಲೂಕುಗಳ ಪೈಕಿ ಐದು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿ, ಕಾಫಿ ಬೆಳೆಯುವ ಪ್ರಮುಖ ಪ್ರದೇಶಗಳಾದ ಸಕಲೇಶಪುರ, ಆಲೂರು ಹಾಗೂ ಬೇಲೂರು ತಾಲ್ಲೂಕುಗಳನ್ನು ಕೈಬಿಟ್ಟಿರುವುದು ಖಂಡನೀಯ ಎಂದರು.

ಫೆಬ್ರವರಿ, ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ತೀವ್ರ ಬಿಸಿಲಿನಿಂದ ಉಷ್ಣಾಂಶ ಹೆಚ್ಚಾಗಿತ್ತು. ಜೂನ್, ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಸುಮಾರು ಶೇ.50ರಷ್ಟು ಮಳೆ ಕೊರತೆಯಾಗಿದ್ದು, ಕಾಫಿ, ಕಾಳುಮೆಣಸು ಹಾಗೂ ಅಡಿಕೆ ಬೆಳೆಗಳಿಗೆ ತೀವ್ರ ಹಾನಿಯಾಗಿದೆ. ಇದರಿಂದ ಸುಮಾರು ಶೇ.50ರಷ್ಟು ಬೆಳೆ ನಷ್ಟವಾಗಿದ್ದು, ಭತ್ತದ ನಾಟಿಯ ಮೇಲೂ ಪರಿಣಾಮ ಬೀರಿದೆ. ಸುಮಾರು ಶೇ.90ರಷ್ಟು ಪ್ರದೇಶದಲ್ಲಿ ಭತ್ತದ ನಾಟಿ ಸಾಧ್ಯವಾಗಿಲ್ಲ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಹೆಗ್ಗಾವೆ ಪುಟ್ಟರಾಜು ಮಾತನಾಡಿ, ಹೆಚ್ಚುವರಿ ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸುವ ಪ್ರಸ್ತಾವನೆ ಇರುವ ಹಿನ್ನಲೆಯಲ್ಲಿ ಸಕಲೇಶಪುರ, ಆಲೂರು ಹಾಗೂ ಬೇಲೂರು ತಾಲ್ಲೂಕುಗಳನ್ನೂ ಸೇರ್ಪಡೆಗೊಳಿಸಬೇಕು. ಈ ಕುರಿತು ಸರ್ಕಾರಕ್ಕೆ 15 ದಿನಗಳ ಕಾಲಾವಕಾಶ ನೀಡಲಾಗಿದ್ದು, ಅವಧಿಯೊಳಗೆ ಕ್ರಮ ಕೈಗೊಳ್ಳದಿದ್ದರೆ ಹೋರಾಟ ನಡೆಸಲಾಗುವುದು. ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಸಂಸದರು ಸರ್ಕಾರದ ಗಮನಕ್ಕೆ ತಂದು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿ ವರ್ಷವೂ ಒಂದಲ್ಲ ಸಮಸ್ಯೆ ಕಾಫಿ ಬೆಳೆಗಾರರು ಹಾಗೂ ಮಲೆನಾಡು ಭಾಗದ ರೈತರನ್ನು ಕಾಡುತ್ತಲೇ ಇರುತ್ತದೆ. ಈ ಹಿನ್ನಲೆಯಲ್ಲಿ ಸೂಕ್ತ ಪರಿಹಾರ ಒದಗಿಸಬೇಕು ಎಂದು ಕೋರಿದರು.

ಸಂಘದ ಖಜಾಂಚಿ ಲೋಕೇಶ್ ಅವರು ಮಾತನಾಡಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮಳೆ ಪ್ರಮಾಣದಲ್ಲಿ ಸುಮಾರು ಶೇ.50 ರಷ್ಟು ಕೊರತೆಯಾಗಿದ್ದು, ಕಾಫಿ ಹಾಗೂ ಕಾಳುಮೆಣಸು ಬೆಳೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಕೊಳೆರೋಗವೂ ಕಾಣಿಸಿಕೊಂಡಿರುವುದರಿಂದ ಸಂಕಷ್ಟದಲ್ಲಿರುವ ಬೆಳೆಗಾರರಿಗೆ ಸರ್ಕಾರ ಕೂಡಲೇ ನೆರವು ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಸಚಿನ್ ಉಪಸ್ಥಿತರಿದ್ದರು.

## ವಾಸ್ತವ ಸ್ಥಿತಿ ಪರಿಶೀಲಿಸಿದ ಬಳಿಕ ಕ್ರಮ ಕೈಗೊಳ್ಳಬೇಕು: ಎಚ್.ಕೆ.ಕುಮಾರಸ್ವಾಮಿ

# ತೇಜಸ್ವಿ ವೃತ್ತ ತೆರವಿಗೆ ಮುನ್ನ ಅಧಿಕಾರಿಗಳ ಸಭೆ ನಡೆಸಿ

• ಪ್ರಜೋದಯ ವರದಿ

**ಸಕಲೇಶಪುರ:** ತೇಜಸ್ವಿ ವೃತ್ತ ಹಾಗೂ ಸುತ್ತಮುತ್ತಲಿನ ರಸ್ತೆ ಅಗಲೀಕರಣ ಮತ್ತು ಒತ್ತುವರಿ ತೆರವು ಕಾರ್ಯಕ್ಕೂ ಮುನ್ನ ಜಿಲ್ಲಾಧಿಕಾರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ ವಾಸ್ತವ ಸ್ಥಿತಿ ಪರಿಶೀಲಿಸಿದ ಬಳಿಕ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಎಚ್.ಕೆ.ಕುಮಾರಸ್ವಾಮಿ ಒತ್ತಾಯಿಸಿದರು.



ತೇಜಸ್ವಿ ವೃತ್ತದಲ್ಲಿ ತೆರವು ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರ ಅಹವಾಲವನ್ನು ಸ್ವೀಕರಿಸಿ ಮಾತನಾಡಿ, ಪಟ್ಟಣದ ಅಭಿವೃದ್ಧಿಗಾಗಿ ಪ್ರಾಧಿಕಾರ ರಚನೆಯಾಗಿದ್ದು, ವೃತ್ತ ಅಭಿವೃದ್ಧಿ ಹಾಗೂ ರಸ್ತೆ ಅಗಲೀಕರಣ ಅಗತ್ಯವಾಗಿದೆ. ಆದರೆ ವ್ಯಾಪಾರಸ್ಥರು ಹಾಗೂ ಕಟ್ಟಡ ಮಾಲೀಕರ ಹಿತವನ್ನೂ ಪರಿಗಣಿಸಿ ಕ್ರಮ ಕೈಗೊಳ್ಳಬೇಕು ಎಂದರು.

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ ರಸ್ತೆ ಅಗಲ, ವೃತ್ತದ ವಿನ್ಯಾಸ ಮತ್ತು ಅಗತ್ಯವಿರುವ ಜಾಗದ ಕುರಿತು ಸಂಬಂಧಪಟ್ಟ ಇಲಾಖೆಗಳು ಸ್ಪಷ್ಟವಾಗಿ ಪರಿಶೀಲಿಸಬೇಕು. ಹಲವು ವ್ಯಾಪಾರಸ್ಥರು ಬ್ಯಾಂಕ್ ಹಾಗೂ ವಿವಿಧ ಸಂಘಗಳಿಂದ ಸಾಲ ಪಡೆದು, ಖಾತೆ ಮತ್ತು ತೆರಿಗೆ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಹಲವು ವರ್ಷಗಳಿಂದ ವ್ಯಾಪಾರ ನಡೆಸುತ್ತಿದ್ದಾರೆ. ಏಕಾಏಕಿ ತೆರವುಗೊಳಿಸಿದರೆ ತೊಂದರೆಯಾಗಲಿದ್ದು, ಕಾನೂನುಬದ್ಧ ಪ್ರಕ್ರಿಯೆ ಹಾಗೂ ವಾಸ್ತವ ಸ್ಥಿತಿಯನ್ನು ಪರಿಗಣಿಸಬೇಕು ಎಂದು ಹೇಳಿದರು.

ಈ ಕುರಿತು ಪುರಸಭೆ ಮುಖ್ಯಾಧಿಕಾರಿ ಹಾಗೂ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಮಾತನಾಡಿದ್ದು, ಸೆ.2ರಂದು ಸಭೆ ನಡೆಸುವುದಾಗಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸ್ಥಳೀಯರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಬೇಕು ಎಂದು ಹೇಳಿದರು. ರಸ್ತೆ ಅಗಲೀಕರಣಕ್ಕೆ ವ್ಯಾಪಾರಸ್ಥರು ವಿರೋಧಿಸುತ್ತಿಲ್ಲ, ಸಾರ್ವಜನಿಕರಿಗೆ ಅನುಕೂಲವಾಗುವ ಅಭಿವೃದ್ಧಿಯ ಜತೆಗೆ ತಮ್ಮ ಜೀವನೋಪಾಯಕ್ಕೂ ಅವಕಾಶ ಕಲ್ಪಿಸಬೇಕು ಎಂಬುದು ಅವರ ಬೇಡಿಕೆಯಾಗಿದೆ ಎಂದರು.

ತೇಜಸ್ವಿ ವೃತ್ತದ ವ್ಯಾಪಾರಿ ವಿಂಪು ಸಂತೋಷ ಮಾತನಾಡಿ, ಹಲವು ವರ್ಷಗಳಿಂದ ಬೇಕರಿ ಸೇರಿದಂತೆ ವಿವಿಧ ವ್ಯಾಪಾರ ನಡೆಸುತ್ತಿರುವವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿದ್ದು, ಬ್ಯಾಂಕ್ ಹಾಗೂ ಸಂಘಗಳಿಂದ ಸಾಲ ಪಡೆದು ಅಂಗಡಿಗಳನ್ನು ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಗತ್ಯವಿರುವಷ್ಟು ಜಾಗವನ್ನು ನಿಯಮಾನುಸಾರ ಬಿಟ್ಟುಕೊಡಲು ಸಿದ್ಧರಿದ್ದು, ತೆರವಿಗೆ ಸೂಕ್ತ ಕಾಲಾವಕಾಶ ನೀಡಬೇಕು ಎಂದು ಪ್ರತಿಭಟನಾಕಾರರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಚಿನ್ ಪ್ರಸಾದ್, ಸಫೀರ್, ಲೋಹಿತ್ ಇನ್ನಿತರರು ಇದ್ದರು.

## ರಾಜ್ಯದ 'ಬಟರ್ ಫ್ರೂಟ್' ಬೆಳೆಗಾರರ ಯಶಸ್ಸು ಕೊಂಡಾಡಿದ ಮೋದಿ

**ನವದೆಹಲಿ:** ಸಾಮಾನ್ಯವಾಗಿ ಬಟರ್ ಫ್ರೂಟ್ (ಆವಕಾಡೊ) ಹಣ್ಣಿನ ಬಗ್ಗೆ ದೇಶದಲ್ಲಿ ಬಹುತೇಕ ಮಂದಿಗೆ ಈಗಲೂ ಗೊತ್ತಿಲ್ಲ. ಒಂದು ಕಾಲದಲ್ಲಿ ವಿದೇಶಗಳಿಂದ ಆಮದಾಗುತ್ತಿದ್ದ ಈ ಹಣ್ಣು ಇಂದು ಭಾರತದ ರೈತರ ಪಾಲಿಗೆ ಬಂಪರ್ ಆದಾಯ ತಂದು ಕೊಡುವ ಹೊಸ ಭರವಸೆಯ ಬೆಳೆಯಾಗಿ ಹೊರಹೊಮ್ಮಿದೆ. ಅದರಲ್ಲೂ ದಕ್ಷಿಣದಲ್ಲಿ ಹೆಚ್ಚಾಗಿ ಬೆಳೆಯುವುದಲ್ಲದೆ, ಉತ್ತಮ ಆದಾಯವನ್ನು ಕೂಡ ಪಡೆಯುತ್ತಿದ್ದು, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಸ್ತಾಪ ಮಾಡಿ ಗಮನ ಸೆಳೆದಿದ್ದಾರೆ.

'ಮನ್ ಕೀ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಈ ವಿಷಯ ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರೈತರು ಬಟ್ಟರ್ ಫ್ರೂಟ್ ಮರಗಳನ್ನ ಬೆಳೆದು ಈ ಕೃಷಿಯಲ್ಲಿ ಸಾಧಿಸುತ್ತಿರುವ ಯಶಸ್ಸನ್ನು ಪ್ರಧಾನಮಂತ್ರಿ ಮೋದಿ ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

# ಸರ್ಕಾರಿ ಶಾಲೆಗಳು ಪ್ರತಿ ಗ್ರಾಮದ ಆತ್ಮವಿದ್ದಂತೆ

• ಪ್ರಜೋದಯ ವರದಿ

**ಆಲೂರು:** ಬಡವ-ಬಲ್ಲಿದ, ಜಾತಿ, ಧರ್ಮ, ಲಿಂಗಗಳ ತಾರತಮ್ಯವಿಲ್ಲದೇ ಸಮಾನತೆಯಡಿಯಲ್ಲಿ ಶಿಕ್ಷಣ ದೊರಕುವ ಕೇಂದ್ರಗಳೆಂದರೆ ಆಯಾ ಊರಿನ ಅಥವಾ ಗ್ರಾಮಗಳ ಸರ್ಕಾರಿ ಶಾಲೆಗಳು. ಇವು ಪ್ರತಿ ಹಳ್ಳಿಯ ಆತ್ಮವಿದ್ದಂತೆ ಎಂದು ಚಲನಚಿತ್ರ ನಿರ್ದೇಶಕ ಅರುಣಕುಮಾರ್ ಕರಡಿಗಾಲ ಅವರು ಅಭಿಪ್ರಾಯಪಟ್ಟರು.

## ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ



ತಾಳೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ''ಪುಟ್ಟಗೂಡಿನ ಪಟ್ಟದರಸಿ'' ಚಲನಚಿತ್ರ ತಂಡದ ವತಿಯಿಂದ ಹಮ್ಮಿಕೊಂಡಿದ್ದ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ನಮ್ಮ ಸಿನಿಮಾ ಚಿತ್ರೀಕರಣ ಸಂದರ್ಭದಲ್ಲಿ ಶಿಕ್ಷಕರು, ಶಾಲಾ ಮಕ್ಕಳು ಹಾಗೂ ಗ್ರಾಮಸ್ಥರು ನೀಡಿದ ಸಹಕಾರವನ್ನು ಮರೆಯುವಂತಿಲ್ಲ. ಈ ಶಾಲೆಗೆ ನಮ್ಮ ಚಿತ್ರತಂಡದಿದ ಪ್ರತಿವರ್ಷ ಮಕ್ಕಳ ಕಲಿಕೆಗೆ ಸಹಾಯ ಮಾಡುವ ತೀರ್ಮಾನವನ್ನು ಮಾಡಿದ್ದೇವೆ. ಸರ್ಕಾರಿ ಶಾಲೆಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸರಕಾರಿ ಶಾಲೆಗಳ ಪಾತ್ರ ಅತ್ಯಮೂಲ್ಯ. ಸರ್ಕಾರಿ ಉಚಿತ ಕೊಡುಗೆಗಳ ಜೊತೆಗೆ ಸಾರ್ವಜನಿಕರು ನೀಡುವ ಉಚಿತ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ಆಲೂರು ತಾಲ್ಲೂಕು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಎಂ.ವರದರಾಜು ಅವರು ಮಾತನಾಡಿ, ಸರ್ಕಾರಿ ಶಾಲೆಗಳ ಉನ್ನತಿಗಾಗಿ ''ಪುಟ್ಟಗೂಡಿನ ಪಟ್ಟದರಸಿ'' ಚಿತ್ರತಂಡ ಶ್ರಮಿಸುತ್ತಿರುವುದು ಶ್ಲಾಘನೀಯ. ಸ್ವಾರ್ಥವನ್ನೇ ಹೊದ್ದು ಮಲಗಿರುವ ಬಹುತೇಕ ಮನಸ್ಸುಗಳಿಗೆ ಇಂತಹ ನಿಸ್ವಾರ್ಥ ಸೇವೆಯು ಮಾದರಿಯಾಗುತ್ತದೆ. ನಾನು, ನನ್ನದು ಎಂದು ಯೋಚಿಸುವ ಬದಲು ನಾವು ನಮ್ಮದು ಎಂದು ಆಲೋಚಿಸಿ ಕಾರ್ಯ ತತ್ಪರರಾಗುವ ಇಂತಹ ವ್ಯಕ್ತಿಗಳು ಮಹತ್ವವೆನಿಸುತ್ತಾರೆ ಎಂದರು.

ಮುಖ್ಯ ಶಿಕ್ಷಕ ಹಾಗೂ ಸಾಹಿತಿ ಕೊಟ್ರೇಶ್ ಎಸ್.ಉಪ್ಪಾರ್ ಅವರು ಮಾತನಾಡಿ, ಅರುಣಕುಮಾರ್ ಕೇವಲ ಚಲನಚಿತ್ರ ನಿರ್ದೇಶಕನಲ್ಲ, ಒಬ್ಬ ದಿಟ್ಟ ಪತ್ರಕರ್ತ, ಸಂಘಟಕ, ಪ್ರತಿಭಾನ್ವಿತ ಉತ್ಸಾಹಿ ಯುವಕ. ಕಳೆದ ನಾಲ್ಕೈದು ವರ್ಷಗಳಿಂದ ಸಕಲೇಶಪುರ ಹೆತ್ತೂರು ಭಾಗದ ಸರಕಾರಿ ಶಾಲಾ ಮಕ್ಕಳಿಗೆ ಪ್ರತಿವರ್ಷ ಎಪ್ಪತ್ತರಿಂದ ಎಂಭತ್ತು ಸಾವಿರ ಮೊತ್ತದ ನೋಟ್ ಪುಸ್ತಕಗಳನ್ನು ಉಚಿತವಾಗಿ ಕೊಡುಗೆಯಾಗಿ ನೀಡುತ್ತಿದ್ದಾರೆ. ಕಳೆದ ವರ್ಷದಿಂದ ನಮ್ಮ ಶಾಲೆಗೂ ಕೊಡುಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಸರಕಾರಿ ಶಾಲೆಗಳ ಔನತ್ಯದ ಬಗ್ಗ ಇವರಿಗಿರುವ ಕಾಳಜಿ ಆದರ್ಶಪ್ರಾಯ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಜಿ ಅಧ್ಯಕ್ಷ ಟಿ.ಇ.ಧರ್ಮ, ಹಿರಿಯ ಶಿಕ್ಷಕಿ ವಿ.ರವಿತ, ಅತಿಥಿ ಶಿಕ್ಷಕಿ ಎ.ಎಸ್.ರೇಖಾ ವಿದ್ಯಾರ್ಥಿಗಳು ಹಾಗೂ ಇನ್ನಿತರರು ಹಾಜರಿದ್ದರು.

# ಜೈವಿಕ ಗೊಬ್ಬರದ ಮಹತ್ವ ಕುರಿತು ಜಾಗೃತಿ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಊಪಿನಹಳ್ಳಿ ಗ್ರಾಮದಲ್ಲಿ ರೈತರಿಗೆ ಜೈವಿಕ ಗೊಬ್ಬರದ ಮಹತ್ವ, ಬಳಕೆ ಹಾಗೂ ಅದರ ಪರಿಣಾಮಗಳ ಕುರಿತು ಶನಿವಾರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಜೈವಿಕ ಗೊಬ್ಬರ ಎಂದರೇನು, ಅದರ ವಿಧಗಳು ಹಾಗೂ ಬೆಳೆಗಳಲ್ಲಿ ಅದರ ಬಳಕೆಯ ಮಹತ್ವವನ್ನು ರೈತರಿಗೆ ವಿವರಿಸಲಾಯಿತು. ಜೈವಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಹೆಚ್ಚಿಸುವುದು, ಮಣ್ಣಿನಲ್ಲಿರುವ ಪ್ರಯೋಜನಕಾರಿ ಸೂಕ್ಷ್ಮಜೀವಿಗಳ ಚಟುವಟಿಕೆಯನ್ನು ಉತ್ತೇಜಿಸುವುದು ಹಾಗೂ ಬೆಳೆಗಳ ಉತ್ತಮ ಬೆಳವಣಿಗೆಗೆ ಸಹಾಯವಾಗುವ ಕುರಿತು ತಿಳಿಸಲಾಯಿತು.

ಜೈವಿಕ ಗೊಬ್ಬರಗಳ ಬಳಕೆಯಿಂದ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು, ಮಣ್ಣಿನ ಆರೋಗ್ಯವನ್ನು ಕಾಪಾಡಬಹುದು ಹಾಗೂ ಪರಿಸರ ಸ್ನೇಹಿ ಕೃಷಿಯನ್ನು ಉತ್ತೇಜಿಸಬಹುದು ಎಂಬುದನ್ನು ರೈತರಿಗೆ ತಿಳಿಸಲಾಯಿತು.

ಮುಖ್ಯವಾಗಿ, ಜೈವಿಕ ಗೊಬ್ಬರವನ್ನು ಹೊರಗಿನಿಂದ ಖರೀದಿಸುವ ಅವಶ್ಯಕತೆ ಇಲ್ಲದೆ ನಮ್ಮ ಊಪಿನಹಳ್ಳಿ ಗ್ರಾಮದಲ್ಲಿಯೇ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತಯಾರಿಸಿಕೊಳ್ಳುವ ಹಾಗೂ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂಬ ಮಾಹಿತಿಯನ್ನು ರೈತರಿಗೆ ನೀಡಲಾಯಿತು. ಸ್ಥಳೀಯವಾಗಿ ಲಭ್ಯವಿರುವ ಸಾವಯವ ವಸ್ತುಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ತಿಳಿಸಲಾಯಿತು.

ಕಾರ್ಯಕ್ರಮದ ಮೂಲಕ ರೈತರು ಜೈವಿಕ ಗೊಬ್ಬರದ ಮಹತ್ವವನ್ನು ಅರಿತುಕೊಂಡು, ತಮ್ಮ ಕೃಷಿಯಲ್ಲಿ ಜೈವಿಕ ಗೊಬ್ಬರಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿತರಾದರು. ಕಾರ್ಯಕ್ರಮವು ರೈತರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಒಟ್ಟು 60 ಜನ ರೈತರು ಭಾಗವಹಿಸಿದ್ದರು.

# ಕಠಿಣ ಪರಿಶ್ರಮದಿಂದ ಯಶಸ್ಸು ಸಾಧ್ಯ




• ಪ್ರಜೋದಯ ವರದಿ

**ಹಾಸನ:** ನಗರದ ಎಸ್.ಆರ್.ಎಸ್ ಪ್ರಜ್ಞಾ ವಿದ್ಯಾಶಾಲೆಯಲ್ಲಿ ಶುಕ್ರವಾರ ರಾಷ್ಟ್ರೀಯ ಕ್ರೀಡಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಆರ್. ರಾಜಗೋಪಾಲಶೆಟ್ಟಿ ಅವರು ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಹಾಕಿ ಕ್ರೀಡೆಯ ಮೇರು ಪ್ರತಿಭೆ ಮೇಜರ್ ಧ್ಯಾನ್ ಚಂದ್‌ರವರ ಜನ್ಮದಿನವನ್ನು ಇಡೀ ದೇಶದಲ್ಲಿ ಆಗಸ್ಟ್ 29 ರಂದು ರಾಷ್ಟ್ರೀಯ ಕ್ರೀಡಾ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಅವರು ತಿಳಿಸಿದರು.

1941 ರಿಂದ 1979ರ ಅವಧಿಯಲ್ಲಿ ಭಾರತದ ಹಾಕಿ ಕ್ರೀಡೆಯಲ್ಲಿ ವಿರಾಜಮಾನರಾಗಿ ವಿಜೃಂಭಿಸಿ ಹಾಕಿ ಮಾಂತ್ರಿಕ ಎಂದೇ ಪ್ರಖ್ಯಾತರಾಗಿರುವ ಧ್ಯಾನ್‌ಚಂದ್ ಅವರು ಹಾಕಿ ಕ್ರೀಡೆಯ ದಂತಕಥೆಯಾಗಿದ್ದಾರೆ. ಅವರ ಚೆಂಡಿನ ನಿಯಂತ್ರಣ, ನಿಖರತೆ ಮತ್ತು ಗೋಲು ಮಾಡುವ ಸಾಮರ್ಥ್ಯವು ವಿಶ್ವದ ಮೆಚ್ಚುಗೆ ಗಳಿಸಿತ್ತು ಎಂದು ಹೇಳಿದರು.

1926 ರಿಂದ 1949 ವರೆಗೆ ಭಾರತವನ್ನು ಹಾಕಿ ಕ್ರೀಡೆಯಲ್ಲಿ ಉತ್ತುಂಗಕ್ಕೇರಿಸಿದ ಮಹಾನ್ ಕ್ರೀಡಾಪಟು ಧ್ಯಾನ್‌ಚಂದ್‌ರವರು ಒಟ್ಟು 8 ಒಲಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಿ 7 ಒಲಂಪಿಕ್ ಕ್ರೀಡೆಗಳಲ್ಲಿ ಚಿನ್ನದ ಪದಕಗಳನ್ನು ಪಡೆದು ಭಾರತದ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ಮಕ್ಕಳಾದ ನೀವು ಧ್ಯಾನ್‌ಚಂದ್ ಅವರಂತೆ ತಮ್ಮ ತಮ್ಮ ಇಚ್ಛೆಯ ಕ್ರೀಡೆಗಳಲ್ಲಿ ತೊಡಗಿಸಿಕೊಂಡು ಕಠಿಣ ಪರಿಶ್ರಮದೊಂದಿಗೆ ಯಶಸ್ವಿನ ಉತ್ತುಂಗಕ್ಕೇರಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಎಂ.ನಟರಾಜ್, ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆ ಆಶಾ ನಟರಾಜ್, ಶಾಲಾ ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ಬಾಣಾವರದಲ್ಲಿ ಮುಸ್ಲಿಮರಿಂದ ಸಂಭ್ರಮದ ಮೆರವಣಿಗೆ

# ಮಾನವೀಯ ಸಂಬಂಧಗಳ ಮಹತ್ವವೇ ಈದ್ ಮಿಲಾದ್

• ಪ್ರಜೋದಯ ವರದಿ

**ಬಾಣಾವರ:** ಪಟ್ಟಣದಲ್ಲಿ ಮುಸ್ಲಿಮರು ಈದ್ ಮಿಲಾದ್ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಿದರು.



ಈದ್ ಮಿಲಾದ್ ಅಂಗವಾಗಿ ಮೊದಲ ದಿನ ಮಕ್ಕಳಿಂದ ಧಾರ್ಮಿಕ ಪಠಣ ಹಾಗು ಸಾರ್ವಜನಿಕರಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಎರಡನೇ ದಿನ ಫಜರ್ ನಮಾಜಿನ ಬಳಿಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಆಚರಣೆಗೆ ಚಾಲನೆ ನೀಡಲಾಯಿತು. ಬಾಣಾವರ ಸುನ್ನಿ ಜಾಮಿಯಾ ಮಸೀದಿಯಲ್ಲಿ 'ಆಸರೆ ಮುಬಾರಕ್' ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ನೂರಾರು ಭಕ್ತರು ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಬಳಿಕ ಮಸೀದಿ ಆವರಣದಲ್ಲಿ ಸಾಮೂಹಿಕ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಭೋಜನದ ನಂತರ ಜಾಮಿಯಾ ಮಸೀದಿ ಮಾರ್ಗವಾಗಿ ಮೆರವಣಿಗೆ ಆರಂಭವಾಯಿತು. ಪ್ರವಾದಿ ಮೊಹಮ್ಮದ್ ಅವರ ಕೀರ್ತನೆಗಳನ್ನು ಪಠಿಸುತ್ತಾ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಬಳಿಕ ಮೆರವಣಿಗೆ ಜಾಮಿಯಾ ಮಸೀದಿ ತಲುಪಿದ ನಂತರ ಸಭಾ ಕಾರ್ಯಕ್ರಮ ನಡೆಯಿತು.

ಸಭೆಯಲ್ಲಿ ಧರ್ಮಗುರು ಮುಫ್ತಿ ಬದ್ರುದ್ದೀನ್ ಸಾಹೇಬ್ ಮಾತನಾಡಿ, ಪ್ರವಾದಿ ಮೊಹಮ್ಮದ್ ಅವರು ವಿಶ್ವ ಕಂಡ ಮಹಾನ್ ಮಾನವತಾವಾದಿಯಾಗಿದ್ದು, ಪ್ರೀತಿ, ವಿಶ್ವಾಸ, ಸಹನೆ ಹಾಗೂ ಶಾಂತಿಯ ಸಂದೇಶವನ್ನು ಸಾರಿದ್ದಾರೆ. ಅಲ್ಲಾಹನ ಸಂದೇಶ ಮತ್ತು ಆಜ್ಞೆಗಳನ್ನು ತಿಳಿಸುವುದರ ಜತೆಗೆ ಮಾನವೀಯ ಸಂಬಂಧಗಳ ಮಹತ್ವವನ್ನು ಸಾರಿದ್ದರು ಎಂದರು.

ಮನುಷ್ಯರು ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಸೌಹಾರ್ದದಿಂದ ಬದುಕಬೇಕು. ಅನಾಥ ಮಕ್ಕಳನ್ನು ಪ್ರೀತಿಯಿಂದ ಲಾಲನೆ- ಪಾಲನೆ ಮಾಡಬೇಕು. ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಎಲ್ಲ ಜಾತಿ, ಧರ್ಮದ ಜನರೊಂದಿಗೆ ಉತ್ತಮ ಸಂಬಂಧ ಹೊಂದುವ ಮೂಲಕ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ನೆಲೆಸುವಂತೆ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರತಿಯೊಬ್ಬ ಮನುಷ್ಯ ಹಾಗೂ ಪ್ರತಿಯೊಂದು ಜೀವಿಗೂ ಬದುಕುವ ಸ್ವಾತಂತ್ರ್ಯವಿದೆ. ಯಾರ ಮನಸ್ಸಿಗೂ ನೋವುಂಟು ಮಾಡದೆ, ಯಾರಿಗೂ ದುಃಖ ನೀಡದೆ ಬದುಕುವುದು ಮುಖ್ಯ. ಇಂತಹ ಮಾನವೀಯ ಸಂದೇಶ ಸಾರಿದ ಪ್ರವಾದಿ ಮೊಹಮ್ಮದ್ ಅವರ ಜನ್ಮದಿನವನ್ನು ಆಚರಿಸುತ್ತಿರುವುದು ಸಂತಸದ ಸಂಗತಿ. ಯುವಜನತೆ ದೇಶದ ಏಳಿಗೆ ಹಾಗೂ ಅಭಿವೃದ್ಧಿಯತ್ತ ಗಮನ ಹರಿಸಬೇಕು. ತಾವು ಹುಟ್ಟಿದ ಊರು ಹಾಗೂ ಜನ್ಮ ನೀಡಿದ ತಂದೆ-ತಾಯಿಗೆ ಗೌರವ ತರುವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಮುಸ್ಲಿಂ ಸಮಾಜದ ಅಧ್ಯಕ್ಷ ಸಯ್ಯದ್ ರಹಿಂ, ಉಪಾಧ್ಯಕ್ಷ ಗೌಸ್ ಪೀರ್, ಕಾರ್ಯದರ್ಶಿ ಶರ್ಫಾನ್, ಖಜಾಂಚಿ ಶಬ್ಬೀರ್, ಸದಸ್ಯರಾದ ಸಮಿವುಲ್ಲಾ, ಮನ್ಸೂರ್, ಪರ್ವೀಜ್, ಫೈಜ್, ವಸಿಮ್, ಆದಿಲ್, ಸಮಾಜದ ಮುಖಂಡರಾದ ಕೆ.ಸಿ.ಖಾದರ್, ಭಾಷಾ ಸಾಬ್, ಮೊಹಮ್ಮದ್ ಇಲಿಯಾಜ್ ಸಾಬ್ ಉಪಸ್ಥಿತರಿದ್ದರು.

## ಗಜಪಡೆಗೆ ತೂಕ ಪರೀಕ್ಷೆ

**ಮೈಸೂರು:** ನಾಡಹಬ್ಬ ಮೈಸೂರು ದಸರಾ 2026ರ ಪ್ರಯುಕ್ತ ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ಗಜಪಡೆಯ ತೂಕ ಪರೀಕ್ಷೆಯನ್ನು ಭಾನುವಾರ ಬೆಳಗ್ಗೆ ಯಶಸ್ವಿಯಾಗಿ ನಡೆಸಲಾಯಿತು ಎಂದು ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಭುಗೌಡ ತಿಳಿಸಿದ್ದಾರೆ.

ನಗರದ ಧನ್ವಂತರಿ ರಸ್ತೆಯ ಸಾಯಿರಾಮ್ ತೂಕದ ಕೇಂದ್ರದಲ್ಲಿ ಬೆಳಗ್ಗೆ 9 ಆನೆಗಳ ತೂಕ ಪರೀಕ್ಷೆ ನಡೆಸಲಾಯಿತು. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು, ಪಶುವೈದ್ಯರು ಹಾಗೂ ಮಾವುತರು ಉಪಸ್ಥಿತರಿದ್ದರು.

ಶ್ರೀಕಾಂತ ಆನೆ 5790 ಕೆಜಿ ತೂಕದೊಂದಿಗೆ ಅತಿ ಹೆಚ್ಚು ತೂಕ ಹೊಂದಿದ್ದು, ಕಾವೇರಿ ಆನೆ 3075 ಕೆಜಿ ತೂಕದೊಂದಿಗೆ ಕಡಿಮೆ ತೂಕ ಹೊಂದಿವೆ. ಎಲ್ಲಾ ಆನೆಗಳು ಆರೋಗ್ಯವಾಗಿದ್ದು, ಜಂಬೂ ಸವಾರಿಗೆ ಸಿದ್ಧವಾಗಿವೆ ಎಂದು ಡಿಸಿಎಫ್ ಪ್ರಭುಗೌಡ ತಿಳಿಸಿದ್ದಾರೆ.

**ದಸರಾ ಆನೆ ವೀಕ್ಷಣೆಗೆ ಇ-ಟಿಕೆಟ್ ಇಲ್ಲ:**

ದಸರಾ ಗಜಪಡೆ ಆ.28ರಿಂದ ಅರಮನೆ ಆವರಣದ ಶಿಬಿರದಲ್ಲಿ ಬೀಡುಬಿಟ್ಟಿದ್ದು, ಆನೆಗಳ ವೀಕ್ಷಣೆಗೆ ಅರಣ್ಯ ಇಲಾಖೆ ಇ-ಟಿಕೆಟಿಂಗ್ ಆರಂಭಿಸಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

# ಹಾಸನ ಮೂಲದ ಮಹಿಳೆ ಶ್ಲಾಘಿಸಿದ ಪ್ರಧಾನಿ ಮೋದಿ

## ಪಿಎಂ ಸ್ವನಿಧಿ ಯೋಜನೆಯಿಂದ ಆರ್ಥಿಕ ಸ್ವಾವಲಂಬನೆ ಸಾಧಿಸಿದ ನಿಂಗಮ್ಮ

• ಪ್ರಜೋದಯ ವರದಿ



**ನವದೆಹಲಿ:** ಪಿಎಂ ಸ್ವನಿಧಿ ಯೋಜನೆಯಡಿ ಸಾಲ ಪಡೆದು ಸ್ವಾವಲಂಬನೆ ಜೀವನ ಸಾಗಿಸುತ್ತಿರುವ ಹಾಸನ ಮೂಲದ ಮಹಿಳೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೆಚ್ಚುಗೆ ಸೂಚಿಸಿದ್ದಾರೆ.

ತಮ್ಮ 137 ಮನದ ಮಾತು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಬೀದಿ ಬದಿ ಹೋಟೆಲ್ ನಡೆಸುತ್ತಿರುವ ಟಿ.ಎಸ್. ನಿಂಗಮ್ಮ ಅವರ ಸ್ಫೂರ್ತಿದಾಯಕ ಯಶೋಗಾಥೆಯನ್ನು ಉಲ್ಲೇಖಿಸಿದರು.

ಪಿಎಂ ಸ್ವನಿಧಿ ಯೋಜನೆಯ ಫಲಾನುಭವಿಗಳಲ್ಲಿ ಶೇ.46ರಷ್ಟು ಮಹಿಳೆಯರಿದ್ದಾರೆ. ದೇಶಾದ್ಯಂತ ಸುಮಾರು 35 ಲಕ್ಷ ಮಹಿಳೆಯರು ಈ ಯೋಜನೆಯೊಂದಿಗೆ ಜೋಡಿಸಿಕೊಂಡು ತಮ್ಮ ಸಣ್ಣ ವ್ಯಾಪಾರ-ವ್ಯವಹಾರಗಳನ್ನು ವಿಸ್ತರಿಸಿಕೊಂಡಿದ್ದಾರೆ. ಮಹಿಳೆಯೊಬ್ಬರ ವ್ಯಾಪಾರ ಬೆಳೆದಾಗ ಇಡೀ ಕುಟುಂಬದ ಭವಿಷ್ಯವೇ ಪ್ರಗತಿ ಕಾಣುತ್ತದೆ. ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುತ್ತದೆ. ಮನೆಯ ಅಗತ್ಯಗಳು ಪೂರೈಕೆಯಾಗುತ್ತವೆ ಮತ್ತು ಅವರ ಆತ್ಮಸ್ಥೈರ್ಯ ಹೆಚ್ಚುತ್ತದೆ. ಅದಕ್ಕೆ ಬೆಂಗಳೂರಿನ ಟಿ.ಎಸ್. ನಿಂಗಮ್ಮ ಹಾಗು ಗಾಜಿಯಾಬಾದ್‌ನ ಬಬಿತಾ ಶರ್ಮಾ ಅವರ ಶ್ರಮ ಮಹಿಳಾ ಸಬಲೀಕರಣಕ್ಕೆ ಜೀವಂತ ಸಾಕ್ಷಿ ಎಂದು ಬಣ್ಣಿಸಿದರು.

ಮೂಲತಃ ಹಾಸನ ಜಿಲ್ಲೆಯವರಾದ ಟಿ.ಎಸ್. ನಿಂಗಮ್ಮ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ತಮ್ಮ ಪತಿಯೊಂದಿಗೆ ಮಾಗಡಿ ರಸ್ತೆಯ ಹೊಸಹಳ್ಳಿ ಮೆಟ್ರೋ ನಿಲ್ದಾಣದ ಬಳಿ ಇಡ್ಲಿ, ದೋಸೆ ಮತ್ತು ಸಾಂಬಾರ್ ಮಾರಾಟ ಮಾಡುವ ಬೀದಿ ಬದಿ ಹೋಟೆಲ್ ಆರಂಭಿಸಿದ್ದಾರೆ.

**ಮಾದಕ ವ್ಯಸನ ಮುಕ್ತವಾಗಲಿ**

ದೇಶವನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಲು ಹಾಗು ಯುವಕರಿಗೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡಲು ಎಲ್ಲರೂ ಕೈಜೋಡಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ.

ನಶೆ ಮುಕ್ತ ಭಾರತ ಅಭಿಯಾನ ಈಗಾಗಲೇ ಆರಂಭಗೊಂಡಿದೆ. ಈ ಅಭಿಯಾನವು ದೇಶದಾದ್ಯಂತ ತಲುಪಬೇಕು. ಯುವಕರನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಬೇಕು. ದೇಶದ ಪ್ರಗತಿಗೆ ಯುವಜನರ ಪಾತ್ರ ಮುಖ್ಯ ಎಂದಿದ್ದಾರೆ. 2020ರ ಆ. 15 ರಂದು ಈ ಅಭಿಯಾನ ಆರಂಭಿಸಲಾಯಿತು. ಮಾದಕ ವ್ಯಸನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು. ಯುವಕರನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಹಾಡು, ಘೋಷಣೆ, ಕಿರುಚಿತ್ರ ಹಾಗು ಬೀದಿ ನಾಟಕಗಳ ಮೂಲಕ ವಿವಿಧ ಭಾರತೀಯ ಭಾಷೆಗಳಲ್ಲಿ ಮಾದಕ ವ್ಯಸನದ ವಿರುದ್ಧ ಜಾಗೃತಿ ಸಂದೇಶವನ್ನು ಜನರಿಗೆ ತಲುಪಿಸುವ ಅಗತ್ಯವಿದೆ. ವ್ಯಸನದ ವಿರುದ್ಧ ಹೋರಾಡುತ್ತಿರುವವರು ಹಾಗು ವ್ಯಸನದಿಂದ ಹೊರಬರಲು ಪ್ರಯತ್ನಿಸುತ್ತಿರುವವರಿಗೆ ನೆರವಾಗುವವರನ್ನು ಮೋದಿ ಶ್ಲಾಘಿಸಿದರು.

ಸ್ವನಿಧಿ ಸಾಲ ಸೌಲಭ್ಯದ ಬಗ್ಗೆ ಉಲ್ಲೇಖಿಸಿದ ಅವರು, ಲಕ್ಷಾಂತರ ಮಹಿಳಾ ಬೀದಿ ಬದಿ ವ್ಯಾಪಾರಿಗಳಿಗೆ ಈ ಯೋಜನೆಯು ಸಹಕಾರಿಯಾಗಿದೆ. ಈ ಯೋಜನೆಯಡಿ 10 ಸಾವಿರ ರೂ. ಸಾಲ ಸಿಗುತ್ತಿದ್ದು, ಶೇ. 46 ರಷ್ಟು ಮಹಿಳೆಯರು ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಪರಿಚಯಿಸಲಾದ ಈ ಯೋಜನೆಯನ್ನು 2030ರ ಮಾ. 31ರ ವರೆಗೆ ವಿಸ್ತರಿಸಲಾಗಿದೆ ಎಂದು ತಿಳಿಸಿದ್ದಾರೆ.

ಆಗಸ್ಟ್ ತಿಂಗಳು ಭಾರತೀಯರಲ್ಲಿ ವಿಶೇಷ ದೇಶಭಕ್ತಿಯ ಭಾವನೆಯನ್ನು ಮೂಡಿಸುತ್ತದೆ. ರಾಷ್ಟ್ರೀಯ ಕೈಮಗ್ಗ ದಿನ, ಸ್ವಾತಂತ್ರ್ಯ ದಿನ, ರಾಷ್ಟ್ರೀಯ ಬಾಹ್ಯಾಕಾಶ ದಿನ, ಕ್ವಿಟ್ ಇಂಡಿಯಾ ಚಳವಳಿ ಹಾಗು ವಿಭಜನೆಯ ಭೀಕರ ಸ್ಮರಣಾ ದಿನದ ಮಹತ್ವವನ್ನು ವಿವರಿಸಿದರು.

ಈ ವರ್ಷ ವಂದೇ ಮಾತರಂ ಗೀತೆಯ 150ನೇ ವಾರ್ಷಿಕೋತ್ಸವ ಆಚರಿಸುತ್ತಿರುವುದು ಸ್ವಾತಂತ್ರ್ಯೋತ್ಸವದ ವಿಶೇಷತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಹರ್ ಘರ್ ತಿರಂಗಾ ಅಭಿಯಾನದ ಜೊತೆಗೆ ಸೂರ್ಯಪಥ ತಿರಂಗ ಉಪಕ್ರಮದ ಮೂಲಕ ಭಾರತದ ತ್ರಿವರ್ಣ ಧ್ವಜವು ಜಾಗತಿಕ ಮಟ್ಟದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ ಎಂದು ಹೆಮ್ಮೆಯಿಂದ ಹೇಳಿದರು.



ಉತ್ತರ ಪ್ರದೇಶದ ಕ್ಲೀನ್-ಅಪ್ ಪಟ್ವಾಯಿ ಮಾದರಿಯಲ್ಲಿ ಯುವಕರು ಕೆರೆಗಳು ಹಾಗು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುತ್ತಿರುವುದು ಸಂತಸದ ವಿಚಾರ. ಅಮರನಾಥ ಯಾತ್ರೆಯ ಸಂದರ್ಭದಲ್ಲಿಯೂ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತಿದೆ. ಯಾತ್ರೆಯಲ್ಲಿ ಬಳಸಿದ ಕುದುರೆ ಹಾಗು ಹೇಸರಗತ್ತೆಗಳ ಸಗಣಿಯನ್ನು ಜೈವಿಕ ಅನಿಲವಾಗಿ ಪರಿವರ್ತಿಸಿ, ಅದರಿಂದ ಉತ್ಪಾದನೆಯಾಗುವ ಶುದ್ಧ ಶಕ್ತಿಯ ಮೂಲಕ ಸ್ವಚ್ಛ ಜ್ಯೋತಿ ಬೆಳಗಿಸಿರುವುದು ಪರಿಸರ ಸಂರಕ್ಷಣೆಗೆ ಉತ್ತಮ ಉದಾಹರಣೆಯಾಗಿದೆ ಮೋದಿ ಬಣ್ಣಿಸಿದರು.

# ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಭಾರೀ ಏರಿಕೆ

» ಮೊದಲನೇ ಪುಟದಿಂದ

ಅಪರಾಧ ಪ್ರಕರಣಗಳ ಹೆಚ್ಚಳಕ್ಕೆ ಪೊಲೀಸ್ ಇಲಾಖೆ ಹಾಗು ರಾಜ್ಯ ಸರ್ಕಾರದ ಲೋಪಗಳೇ ಕಾರಣ ಎಂದು ಶಾಸಕ ಎ.ಮಂಜು ಆರೋಪಿಸಿದ್ದಾರೆ. ದುರ್ಬಲ ವರ್ಗದ ಜನರು ಇಂತಹ ಅಪರಾಧಗಳಿಂದ ಹೆಚ್ಚು ಬಾಧಿತರಾಗುತ್ತಿದ್ದಾರೆ. ಅಪರಾಧಿಗಳ ಮೇಲೆ ಪೊಲೀಸರು ನಿರಂತರ ನಿಗಾ ವಹಿಸಿ ಕಠಿಣ ಕ್ರಮ ಕೈಗೊಂಡರೆ ಅಪರಾಧ ಪ್ರಮಾಣ ಕಡಿಮೆಯಾಗಲಿದೆ ಎಂದು ಹೇಳಿದ್ದಾರೆ.

ನೈತಿಕ ಮೌಲ್ಯಗಳ ಕುಸಿತ ಹಾಗು ನೈತಿಕ ಶಿಕ್ಷಣದ ಕೊರತೆಯೂ ಅಪರಾಧಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ವಿದ್ಯಾವಂತರೂ ವಿವಿಧ ಕಾರಣಗಳಿಂದ ಅಪರಾಧ ಚಟುವಟಿಕೆ ಗಳಲ್ಲಿ ತೊಡಗುತ್ತಿರುವುದು ಕಳವಳಕಾರಿ ಬೆಳವಣಿಗೆ ಎಂದು ಅಭಿಪ್ರಾಯಪಟ್ಟಿದ್ದಾರೆ.

**ಪ್ರೀತಿ-ಪ್ರೇಮವೆಂಬ ಮೋಸದ ಬಲೆ**

ಮಕ್ಕಳಲ್ಲಿ ಹೆಚ್ಚುತ್ತಿರುವ ಮೊಬೈಲ್ ಹಾಗು ಸಾಮಾಜಿಕ ಜಾಲತಾಣಗಳ ಬಳಕೆ ಅವಘಡಕ್ಕೆ ಕಾರಣವಾಗುತ್ತಿದೆ. ಪ್ರೀತಿ-ಪ್ರೇಮದ ಆಕರ್ಷಣೆ ಸೇರಿ ಹಲವು ಕಾರಣಗಳು ಇಂತಹ ಪ್ರಕರಣಗಳಿಗೆ ಕಾರಣವಾಗುತ್ತಿವೆ. ಬಡ ಕುಟುಂಬಗಳು ಹಾಗು ಏಕ ಪೋಷಕರ ಕುಟುಂಬಗಳ ಮಕ್ಕಳನ್ನು ಪ್ರೀತಿಯ ನೆಪದಲ್ಲಿ ಸೆಳೆದು ಬಳಿಕ ಕೈಬಿಡುವ ಪ್ರಕರಣಗಳು ನಡೆಯುತ್ತಿವೆ. ಮಕ್ಕಳ ಮೇಲೆ ಸಾಮಾಜಿಕ ಜಾಲತಾಣಗಳ ಪ್ರಭಾವ ನಿಯಂತ್ರಣ ಮೀರುತ್ತಿದೆ.

**ಜಾಗೃತಿಗೆ ಅನುಮತಿಯ ಬಲೆ**

ರಸ್ತೆ ಸುರಕ್ಷತೆ, ಲೈಂಗಿಕ ದೌರ್ಜನ್ಯ ತಡೆ, ಆರೋಗ್ಯ ಜಾಗೃತಿ ಮೂಲಕ ಮಕ್ಕಳು ಹಾಗು ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತವೆ. ಜಿಲ್ಲೆಯಲ್ಲಿ ಅನೇಕ ಮಹಿಳಾ ಸಂಘ ಸಂಸ್ಥೆಗಳು ಇಂತಹ ಸಮಾರಂಭಗಳನ್ನು ಆಯೋಜಿಸಿ ಕೊಂಡು ಬರುತ್ತಿವೆ. ಆದರೆ ಸರ್ಕಾರದ ಇತ್ತೀಚಿನ ಆದೇಶ ಅದಕ್ಕೆ ವ್ಯತಿರಿಕ್ತವಾಗಿದೆ. ಯಾವುದೇ ಸರ್ಕಾರಿ ಶಾಲೆಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕೆಂದರೆ ಜಿಲ್ಲಾಧಿಕಾರಿ ಅನುಮತಿ ಕಡ್ಡಾಯವಾಗಿದೆ. ಮೊದಲೆಲ್ಲಾ ಶಾಲಾ ಮುಖ್ಯ ಶಿಕ್ಷಕರೇ ಅನುಮತಿ ನೀಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಮಕ್ಕಳನ್ನು ಇಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಭಾರೀ ತೊಂದರೆಯಾಗುತ್ತಿದೆಂದು ಮಹಿಳಾ ಸಂಘಟನೆಯ ಪದಾಧಿಕಾರಿಯೊಬ್ಬರು ಹೇಳಿದರು.

## ಎ.ಟಿ.ರಾಮಸ್ವಾಮಿ ರಾಜಕಾರಣಕ್ಕೆ ಮರಳಲಿ: ಒತ್ತಾಯ

» ಮೊದಲನೇ ಪುಟದಿಂದ

ಮುಖಂಡ ಪ್ರಸಾದ್ ಅವರು ಮಾತನಾಡಿ, ಎ.ಟಿ.ರಾಮಸ್ವಾಮಿ ಅವರು ಜನರ ಹಿತದೃಷ್ಟಿ ಯಿಂದ ಉತ್ತಮ ತೀರ್ಮಾನ ಕೈಗೊಳ್ಳಬೇಕು. ಅವರ ಬೆಂಬಲಕ್ಕೆ ಅಪಾರ ಸಂಖ್ಯೆಯ ಜನರಿದ್ದು, ಯಾವ ಸಂದರ್ಭದಲ್ಲಾದರೂ ಅಭಿಮಾನಿಗಳು ಹಾಗು ಕಾರ್ಯಕರ್ತರು ಅವರೊಂದಿಗೆ ನಿಲ್ಲಲು ಸಿದ್ಧರಿದ್ದಾರೆಂದು ತಿಳಿಸಿದರು.

ಕಿಸಾನ್ ರೈತ ಸಂಘದ ಜಿಲ್ಲಾಧ್ಯಕ್ಷ ಯೋಗಣ್ಣ ಅವರು ಮಾತನಾಡಿ, ಪ್ರಸಕ್ತ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದರೆ ಪ್ರಾಮಾಣಿಕತೆ, ಸರಳತೆ ಹಾಗು ಜನಪರ ಕಾಳಜಿ ಹೊಂದಿ ರುವ ರಾಜಕಾರಣಿಗಳ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಎ.ಟಿ.ರಾಮಸ್ವಾಮಿ ಅವರು ಇಂತಹ ಗುಣಗಳನ್ನು ಹೊಂದಿರುವ ನಾಯಕರಾಗಿದ್ದು, ರೈತರು, ಗ್ರಾಮೀಣ ಜನರು ಸೇರಿ ವಿವಿಧ ವರ್ಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಹೊಂದಿದ್ದಾರೆ. ಹೀಗಾಗಿ ಅವರು ಸಕ್ರಿಯ ರಾಜಕಾರಣಕ್ಕೆ ಮರಳಿ ಜನರ ಪರವಾಗಿ ಧ್ವನಿ ಎತ್ತಬೇಕೆಂದು ಒತ್ತಾಯಿಸಿದರು.

ಜನರೊಂದಿಗೆ ನಿರಂತರ ಸಂಪರ್ಕ, ಅಭಿವೃದ್ಧಿ ಕಾರ್ಯಗಳಿಗೆ ಒತ್ತು ಹಾಗು ಜನಪರ ವಿಚಾರ ಗಳಲ್ಲಿ ಸ್ಪಂದಿಸುವ ನಾಯಕತ್ವ ಇಂದಿನ ಸಂದರ್ಭದಲ್ಲಿ ಅಗತ್ಯವಾಗಿದೆ. ಈ ಹಿನ್ನಲೆಯಲ್ಲಿ ಎ.ಟಿ.ರಾಮಸ್ವಾಮಿ ಅವರು ತಮ್ಮ ರಾಜಕೀಯ ಅನುಭವವನ್ನು ಬಳಸಿಕೊಂಡು ಮತ್ತೆ ಸಕ್ರಿಯವಾಗಿ ರಾಜಕೀಯಕ್ಕೆ ಮರಳಬೇಕೆಂದರು.

ಮುಖಂಡರಾದ ಮಂಜುನಾಥ್ ರಾಜೇ ಅರಸ್, ಕೃಷ್ಣ, ಈರಪ್ಪ, ದೊಡ್ಡಹಳ್ಳಿ ಮಂಜು, ರಾಮಶೇಷು, ಧರ್ಮೇಗೌಡ, ಶಿವಣ್ಣ ಸೇರಿ ಹೋಬಳಿಯ ವಿವಿಧ ಗ್ರಾಮಗಳ ಗ್ರಾಮಸ್ಥರು, ಅಭಿಮಾನಿಗಳುಇದ್ದರು.

## ಕಾರಾಗೃಹ ಸಿಬ್ಬಂದಿ ಮೇಲೆ ಹಲ್ಲೆ ಕೇಸ್‌ಗೆ ತಿರುವು

» ಮೊದಲನೇ ಪುಟದಿಂದ

ಹೊರಗೆ ಸಿಗು ಎಂದು ಬೆದರಿಕೆ ಹಾಕಿದ್ದ. ಇದೇ ವಿಚಾರಕ್ಕೆ ಸಿಬ್ಬಂದಿ ಜೊತೆ ಅನುಚಿತವಾಗಿ ವರ್ತಿಸಿದ್ದ ವಿಕಾಸ್ ಕೆಲ ಹೊತ್ತಿನ ಬಳಿಕ ತಾನು 10 ಮಾತ್ರೆ ಸೇವಿಸಿದ್ದೇನೆಂದು ಹೇಳಿದ್ದ. ಆಗ ಭಯಗೊಂಡ ಸಿಬ್ಬಂದಿ ಮೇಲಾಧಿಕಾರಿಗಳ ಅನುಮತಿ ಪಡೆದು ಆತನನ್ನು ಭದ್ರತೆಯೊಂದಿಗೆ ಆಸ್ಪತ್ರೆಗೆ ದಾಖಲಿಸಿದ್ದರು. ಪರೀಕ್ಷಾ ವರದಿಯಲ್ಲಿ ಆತ ಯಾವುದೇ ಮಾತ್ರೆ ಸೇವಿಸಿರಲಿಲ್ಲ, ಸುಳ್ಳು ಹೇಳಿದ್ದಾನೆಂದು ಸಾಬೀತಾಗಿದೆ. ಆಸ್ಪತ್ರೆಗೆ ದಾಖಲಾಗುವ ದುರುದ್ದೇಶದಿಂದ ಆತ್ಮ ಹತ್ಯೆಯ ನಾಟಕವಾಡಿದ ಹಾಗು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾನೆಂದು ವಿಕಾಸ್ ವಿರುದ್ಧ ದೂರು ಸಲ್ಲಿಸಲಾಗಿದೆ.

ಈತ ರೌಡಿ ಶೀಟರ್ ಮಂಜೇಶ್ ಹತ್ಯೆ ಪ್ರಕರಣದ ಆರೋಪಿ ಎನ್ನಲಾಗಿದೆ. ಆದರೆ ಡಿಎಸ್‌ಬಿಯಿಂದ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಹತ್ತಕ್ಕೂ ಅಧಿಕ ಆರೋಪಿಗಳ ಹೆಸರು ಮತ್ತು ಗಾಯಾಳು ಸಿಬ್ಬಂದಿ ಹೆಸರು ಬೇರೆ ಇದೆ. ಇದು ಸಾಕಷ್ಟು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

# ಸಾಧಕರ ಪರಿಚಯ ಭವಿಷ್ಯದ ಪೀಳಿಗೆಗೆ ಆಗಲಿ

## ಶಾಸಕ ಸುರೇಶ್ ಭಾಗಿ ಸಲಹೆ | ಸಾಧಕರ ಹೆಸರು ಉಳಿವಿಗಾಗಿ ಸಂಘಟನೆ

• ಪ್ರಜೋದಯ ವರದಿ

**ಬೇಲೂರು:** ನೂರಾರು ವರ್ಷಗಳ ಇತಿಹಾಸ ಹೊಂದಿರುವ ಬೇಲೂರಿನಲ್ಲಿ ಅನೇಕರು ಉತ್ತಮ ಕೆಲಸಗಳ ಮೂಲಕ ಚಿರಸ್ಥಾಯಿಯಾಗಿದ್ದು, ಅವರನ್ನು ಮುಂದಿನ ಪೀಳಿಗೆಗೆ ಪರಿ ಚಯಿಸುವ ಕೆಲಸ ನಮ್ಮಿಂದ ಆಗಬೇಕೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಸಾಧಕರ ಹೆಸರು ಉಳಿವಿಗಾಗಿ ಸಂಘಟನಾ ಸಮಿತಿಯಿಂದ ಭಾನುವಾರ ಆಯೋಜಿಸಿದ್ದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಥಮವಾಗಿ ಬೇಲೂರು-ಆಲೂರು-ಸಕಲೇಶಪುರ ಶಾಸಕರಾಗಿ ಸಮಾಜಮುಖಿ ಕೆಲಸಗಳನ್ನು ಮಾಡಿದ ಬೋರಣ್ಣಗೌಡರ ಸೇವೆ ಯನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ದುಡಿಮೆಯ ಕೆಲ ಭಾಗವನ್ನು ಜನರ ಸೇವೆಗೆ ಮುಡಿಪಾಗಿಟ್ಟು ಬಡವರು ಸಾರ್ವಜನಿಕರ ಅನುಕೂಲಕ್ಕಾಗಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಹಾಗು ಬಡ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಿಸಿದ್ದಲ್ಲದೆ, ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬೇಲೂರಿನಲ್ಲೇ ದೊಡ್ಡ ದಾನಿಗಳೆಂದು ಹೆಸರು



ಪಡೆದ ವೈ.ಡಿ.ನಂಜೇಗೌಡರ ಸೇವೆ ಮರೆಯುವಂತಿಲ್ಲ. ಇನ್ನೂ ಸಾಕಷ್ಟು ಜನರು ಸಮಾಜಕ್ಕಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ. ಜಾತಿ, ಧರ್ಮ ಎನ್ನದೆ ಅವರನ್ನು ಗುರುತಿಸುವ ಕೆಲಸವಾಗಬೇಕು. ಸಂಘಟನಾ ಸಮಿತಿಯವರು ಸರ್ಕಾರಿ ಆಸ್ಪತ್ರೆ ಮುಂಭಾಗ ವೈ.ಡಿ.ನಂಜೇಗೌಡರ ಪ್ರತಿಮೆ ನಿರ್ಮಿಸಲು ಮನವಿ ಮಾಡಿದ್ದು, ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಅವರ ಕುಟುಂಬಕ್ಕೂ ಗೌರವ ಸಲ್ಲಿಸಲಾಗುವುದು. ಬೇಲೂರಿನಲ್ಲಿ ಕಲೆ, ಸಾಹಿತ್ಯ, ಸಂಗೀತ ಸೇರಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸುವ ಕೆಲಸವಾಗಬೇಕು ಎಂದರು.

ಸಂಘಟನೆ ಜಿಲ್ಲಾಧ್ಯಕ್ಷ ಆರ್.ಪಿ. ವೆಂಕಟೇಶಮೂರ್ತಿ ಅವರು ಮಾತನಾಡಿ, ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇಯಾದ ಕೊಡುಗೆ ನೀಡಿದ ಗಣ್ಯರನ್ನು ಗುರುತಿಸಲು ಕರ್ನಾಟಕ ಸಾಧಕರ ಹೆಸರು ಉಳಿವಿಗಾಗಿ ಸಂಘಟನಾ ಸಮಿತಿ ರಚಿಸಲಾಗಿದೆ. ಪ್ರಮುಖವಾಗಿ ಶಾಸಕರಾಗಿ ಬಸ್ಸುಗಳಲ್ಲಿ ಓಡಾಡಿ ಸರಳ ಜೀವನದೊಂದಿಗೆ ಸಾರ್ವಜನಿಕರ ಸೇವೆಗೆ ಮುಂದಾಗಿದ್ದ ಬೋರಣ್ಣ ಗೌಡರು ಹಾಗು ವೈ.ಡಿ.ನಂಜೇಗೌಡರು ದಾನಿಗಳಾಗಿ ಅತ್ಯುತ್ತಮ ಸೇವೆ ಸಲ್ಲಿಸಿದವರು. ಬೇಲೂರು- ಹಳೇಬೀಡು ಶಿಲ್ಪಕಲೆಗೆ ಹೆಸರಾಗಿದ್ದು, ಇಲ್ಲಿ ಶಿಲ್ಪಕಲಾ ಕಾಲೇಜು ನಿರ್ಮಿಸುವಂತೆ ಸರ್ಕಾರದ ಮೇಲೆ ನಮ್ಮ ಸಂಘಟನೆ, ಸಾರ್ವಜನಿಕರು, ಸಂಘ ಸಂಸ್ಥೆಗಳು ಒತ್ತಡ ಹಾಕಿದರೆ ಶಿಲ್ಪಕಲೆಗೆ ಪ್ರೋತ್ಸಾಹ ನೀಡಿದಂತ್ತಾಗುತ್ತದೆಂದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಬೇಲೂರು-ಹಳೇಬೀಡಿನಲ್ಲಿ ಐತಿಹಾಸಿಕ ದೇವಾಲಯಗಳು ನಿರ್ಮಾಣವಾಗದಿದ್ದರೆ ವಿಶ್ವ ಪ್ರಸಿದ್ಧ ತಾಣಗಳಾಗಿ ಬೆಳಕಿಗೆ ಬರು ತ್ತಿರಲಿಲ್ಲ. ಆದ್ದರಿಂದ ನಿಜವಾದ ಸಾಧಕರೆಂದರೆ ಶಿಲ್ಪಿಗಳು. ಅವರ ಪುತ್ಥಳಿಗಳನ್ನು ಪಟ್ಟಣದ ಪ್ರಮುಖ ವೃತ್ತಗಳಲ್ಲಿ ನಿರ್ಮಿಸಬೇಕೆಂದರು.

**ಸಮಾಜ ಸೇವೆಯ ತುಡಿತ**

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವೈ.ಎನ್.ಕೃಷ್ಣೇಗೌಡ ಅವರು ಮಾತನಾಡಿ, ನಾವು ಗಳಿಸಿದ ಆಸ್ತಿ ನಮ್ಮ ಜೊತೆಗೆ ಬರುವುದಿಲ್ಲ. ಮಾಡಿದ ಧಾನ-ಧರ್ಮ, ಕೊಡುಗೆ ನೀಡಿದ ಕೆಲಸ ಗಳು ನಮ್ಮ ಹೆಸರು ಉಳಿಸುತ್ತವೆ. ಸಂಪತ್ತಿನಲ್ಲಿ ಶೇ.10 ರಷ್ಟು ಬಡ ಮಕ್ಕಳು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಮೀಸಲಿಡಬೇಕೆಂದು ನಮ್ಮ ತಂದೆ ಹೇಳುತ್ತಿದ್ದರು. ಸರ್ಕಾರಿ ಆಸ್ಪತ್ರೆ, ಪ್ರಥಮ ದರ್ಜೆ ಕಾಲೇಜು, ದೇವಸ್ಥಾನಗಳು ಸೇರಿ ಇತರ ಕೆಲಸಗಳನ್ನು ಅವರು ಮಾಡಿದರು. ಅಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕೆಂದು ತಂದೆಯವರೇ ಬ್ಯಾಂಕ್‌ನಲ್ಲಿ 1 ಕೋ. ರೂ. ಠೇವಣಿ ಬಡ್ಡಿ ಹಣದಲ್ಲಿ ಸಮಾಜ ಸೇವೆಗೆ ವಿನಿಯೋಗ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹಣ ಕ್ರೂಢೀಕರಿಸಿ ಹೆಚ್ಚು ಕೆಲಸ ಮಾಡುತ್ತೇವೆಂದರು.

ದಿ|| ಮಾಜಿ ಶಾಸಕ ಬೋರಣ್ಣಗೌಡ ಹಾಗು ವೈ.ಡಿ.ನಂಜೇಗೌಡ ಕುಟುಂಬ ಸದಸ್ಯರು ಮತ್ತು ಐಆರ್‌ಎಸ್ ಜಂಟಿ ನಿರ್ದೇಶಕ ಶ್ರೇಯಸ್, ನಂಜೇಗೌಡರ ಪುತ್ರ ವೈ.ಎನ್. ಮಲ್ಲೇಶಗೌಡ, ಸಾಹಿತಿ ಬೇಲೂರು ರಘುನಂದನ್, ಪತ್ರಕರ್ತ ಮಾ.ಶಿವಮೂರ್ತಿ ಮತ್ತು ಸರ್ಕಾರಿ ಶಾಲೆಯ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜ್, ರೈತ ಸಂಘದ ತಾಲ್ಲೂಕು ಅಧ್ಯಕ್ಷ ಬೋಗ ಮಲ್ಲೇಶ್, ಕರ್ನಾಟಕ ಸಾಧಕರ ಹೆಸರು ಉಳಿವಿಗಾಗಿ ಸಂಘಟನಾ ಸಮಿತಿ ತಾಲ್ಲೂಕು ಅಧ್ಯಕ್ಷ ಮಹೇಶಗೌಡ, ಗೌರವಾಧ್ಯಕ್ಷ ಯೋಗೀಶ್‌ಗೌಡ, ಉಪಾಧ್ಯಕ್ಷ ಸಿದ್ದೇಗೌಡ, ಪ್ರಧಾನ ಕಾರ್ಯದರ್ಶಿ ಧರ್ಮ ಪ್ರಕೃತಿ, ಚಂದ್ರು, ಯೋಗೇಶ್, ಅದ್ದೂರಿ ಕುಮಾರ್ ಇತರರಿದ್ದರು.

## ದೇಶವೇ ಬೆಚ್ಚಿಬೀಳುವ ಮಾಹಿತಿ ಬಹಿರಂಗಪಡಿಸುವೆ

» ಮೊದಲನೇ ಪುಟದಿಂದ

ಕೆಪಿಎಸ್‌ಸಿ ಹಂತ ಹಂತವಾಗಿ ಕೆಳಮಟ್ಟಕ್ಕೆ ಹೋಗಿದೆ. ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ಕೊಡಲ್ಲ, ಸದೆಬಡಿತೀನಿ ಎಂದು ಮುಖ್ಯ ಮಂತ್ರಿ ಹೇಳಿದ್ದರು. ಇಂತಹ ಪರಿಸ್ಥಿತಿಯಲ್ಲಿರುವ ಕೆಪಿಎಸ್‌ಸಿ ಸಂಸ್ಥೆಯನ್ನು ಏನು ಸದೆ ಬಡೆಯೋದು ಎಂದು ವಾಗ್ದಾಳಿ ನಡೆಸಿದರು.

ಪಶುವೈದ್ಯಕೀಯ ಪರೀಕ್ಷೆಯಲ್ಲಿ ಶೇ.95 ಅಂಕ ಪಡೆದವರಿಗೆ ಅವಕಾಶ ಸಿಕ್ಕಿಲ್ಲ. ಅನುತ್ತೀರ್ಣ ರಾದವರಿಗೆ ಎರಡನೇ ರ್‍ಯಾಂಕ್ ನೀಡಲಾಗಿದೆ. ಮುಂದಿನ ಏಳು ವರ್ಷ ನಾನೇ ಮುಖ್ಯಮಂತ್ರಿ ಆಗುತ್ತೇನೆಂದು ಹೇಳುತ್ತಾರೆ. ಸಾಯೋವರೆಗೂ ನೀವೇ ಇರಿ, ಆದರೆ ಇದನ್ನೆಲ್ಲಾ ಸರಿಪಡಿಸಿ. ನೀರಾವರಿ ಇಲಾಖೆಯಲ್ಲಿ ನೇಮಕಾತಿಗೆ ಹೈಕೋರ್ಟ್ ತಡೆ ನೀಡಿದೆ. ಕೆಪಿಎಸ್‌ಸಿ ಯಾವಾಗ ತೊಳೆಯುತ್ತಿರಾ. ಸರ್ಕಾರದಿಂದ ಐಎಎಸ್ ಅಧಿಕಾರಿಯನ್ನು ಕಂಟ್ರೋಲರನ್ನಾಗಿ ಹಾಕುತ್ತಾರೆ. ಅಕ್ರಮ ಮಾಡಿದವರ ಮೇಲೆ ಒಬ್ಬರ ಮೇಲೆ ಕ್ರಮ ತಗೊಂಡಿದ್ದೀರಾ ಎಂದು ತರಾಟೆಗೆ ತೆಗೆದುಕೊಂಡರು.

## ದೀರ್ಘಾವಧಿ ಯುರೇನಿಯಂ ಒಪ್ಪಂದಕ್ಕೆ ಸಹಿ



• ಪ್ರಜೋದಯ ವರದಿ

**ತಾಷ್ಕೆಂಟ್:** ಭಾರತ ಮತ್ತು ಉಜ್ಬೇಕಿಸ್ತಾನ್ ದೀರ್ಘಾವಧಿಯ ಯುರೇನಿಯಂ ಒಪ್ಪಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಉಜ್ಬೇಕಿಸ್ತಾನ್ ಅಧ್ಯಕ್ಷ ಸಹಿ ಹಾಕಿದ್ದಾರೆ.

ಭಾರತವು ತನ್ನ ಅತ್ಯಂತ ಪ್ರಮುಖ ಪರಮಾಣು ಇಂಧನ ವಿಜಯಗಳಲ್ಲಿ ಒಂದಾಗ ಬಹುದಾದದನ್ನು ಪಡೆದುಕೊಂಡಿದೆ. ಭಾರತ ಮತ್ತು ಉಜ್ಬೇಕಿಸ್ತಾನ್ ದೀರ್ಘಾವಧಿಯ ಯುರೇನಿಯಂ ಪೂರೈಕೆ ವ್ಯವಸ್ಥೆಯನ್ನು ಸ್ಥಾಪಿಸುವುದಾಗಿ ಪ್ರಧಾನಿ ಮೋದಿ ಭಾನುವಾರ ದೃಢಪಡಿಸಿದ್ದಾರೆ.

ಇದು ಭಾರತದ ಪರಮಾಣು ವಿದ್ಯುತ್ ಯೋಜನೆಗಳನ್ನು ದೀರ್ಘಾವಧಿವರೆಗೆ ಟ್ರ್ಯಾಕ್‌ನಲ್ಲಿಡಲು ಸಹಾಯ ಮಾಡುವ ನಿರೀಕ್ಷೆಯಿದೆ. ಪ್ರಧಾನಿ ಮೋದಿ ಉಜ್ಬೆಕ್ ಅಧ್ಯಕ್ಷ ಶವ್ಕತ್ ಮಿರ್ಜಿಯೋಯೆವ್ ಅವರನ್ನು ಭೇಟಿ ಮಾಡಿದ ನಂತರ ಈ ಘೋಷಣೆ ಹೊರಬಿದ್ದಿದೆ.

ಯುರೇನಿಯಂ ಪೂರೈಕೆಗಾಗಿ ನಾವು ದೀರ್ಘಾವಧಿಯ ವ್ಯವಸ್ಥೆಯನ್ನು ಸಹ ಸ್ಥಾಪಿಸುತ್ತೇವೆ. ಇದು ಅತಿದೊಡ್ಡ ತೀರ್ಮಾನಗಳಲ್ಲಿ ಒಂದಾಗಿದೆ ಎಂದು ಮೋದಿ ಬಣ್ಣಿಸಿದ್ದಾರೆ. ಉಜ್ಬೇಕ್ ಅಧ್ಯಕ್ಷ ಕೆಲವು ಗಮನಾರ್ಹ ವಿಚಾರಗಳನ್ನು ಹಂಚಿಕೊಂಡರು. ಭಾರತ ನಮ್ಮ ವಿಶ್ವಾಸಾರ್ಹ ಕಾರ್ಯತಂತ್ರದ ಪಾಲುದಾರ ಎಂದು ಅವರು ಬಣ್ಣಿಸಿದರು. ದ್ವಿಪಕ್ಷೀಯ ವ್ಯಾಪಾರವು ಕಳೆದ ವರ್ಷ ಮೊದಲ ಬಾರಿಗೆ 1 ಬಿಲಿಯನ್ ಡಾಲರ್ ಗಡಿಯನ್ನು ದಾಟಿದೆ. ಕೆಲವು ವರ್ಷಗಳ ಹಿಂದಿನದಕ್ಕೆ ಹೋಲಿಸಿದರೆ ಜಂಟಿ ಉದ್ಯಮಗಳು ಏಳು ಪಟ್ಟು ಹೆಚ್ಚಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

# ನಿಜವಾದ ಶತ್ರುವನ್ನು ಗುರುತಿಸಿ: ಮುಸ್ಲಿಂ ರಾಷ್ಟ್ರಗಳಿಗೆ ಮೊಜ್ತಬಾ ಖಮೇನಿ ಕರೆ

• ಪ್ರಜೋದಯ ವರದಿ



**ಇರಾನ್:** ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗಿ ಆರು ತಿಂಗಳು ಪೂರೈಸಿದ ಹಿನ್ನಲೆಯಲ್ಲಿ, ಇರಾನ್‌ನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ಭಾನುವಾರ ಮುಸ್ಲಿಂ ದೇಶಗಳಿಗೆ ಲಿಖಿತ ಸಂದೇಶವೊಂದನ್ನು ರವಾನಿಸಿದ್ದಾರೆ. ಅಮೇರಿಕಾ ಮತ್ತು ಇಸ್ರೇಲ್ ವಿರುದ್ಧ ಒಗ್ಗಟ್ಟು ಪ್ರದರ್ಶಿಸುವಂತೆ ಅವರು ಕರೆ ನೀಡಿದ್ದಾರೆ.

ಫೆಬ್ರುವರಿ 28ರಂದು ಆರಂಭವಾದ ಯುದ್ಧದಲ್ಲಿ, ಇರಾನ್ ಪರಮೋಚ್ಚ ನಾಯಕ ರಾಗಿದ್ದ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೀಡಾದ ಬಳಿಕ ಅವರ ಉತ್ತರಾಧಿಕಾರಿ ಯಾಗಿ ಅಧಿಕಾರ ವಹಿಸಿಕೊಂಡಿರುವ ಮೊಜ್ತಬಾ ಖಮೇನಿ, ಈವರೆಗೆ ಸಾರ್ವಜನಿ ಕವಾಗಿ ಕಾಣಿಸಿಕೊಂಡಿಲ್ಲ. ಜೊತೆಗೆ ಇರಾನ್ ಆಡಳಿತವು ಅವರ ಯಾವುದೇ ವಿಡಿಯೋ ಅಥವಾ ಆಡಿಯೋ ತುಣುಕನ್ನು ಬಿಡುಗಡೆ ಮಾಡಿಲ್ಲ.

ಪ್ರವಾದಿ ಮಹಮ್ಮದ್ ಅವರ ಜನ್ಮದಿನದ ಸಂದರ್ಭದಲ್ಲಿ ಹೊರಡಿಸಿದ ಸಂದೇಶ ದಲ್ಲಿ, ಇಸ್ಲಾಮಿಕ್ ರಾಷ್ಟ್ರಗಳ ಸಮಸ್ಯೆಗಳಿಗೆ ಪರಸ್ಪರ ಐಕ್ಯತೆ, ಸ್ನೇಹ ಮತ್ತು ಒಳಿತಿನ ಹಾದಿಯಲ್ಲಿ ಸಹಕಾರ ನೀಡುವುದೇ ಏಕೈಕ ಪರಿಹಾರ ಎಂದು ಖಮೇನಿ ಹೇಳಿದ್ದಾರೆ. ಯಾವುದೇ ವ್ಯಕ್ತಿ ತಿಳಿದೋ ತಿಳಿಯದೆಯೋ ಮುಸ್ಲಿಂ ಸಮುದಾಯದಲ್ಲಿ ಭಿನ್ನಾಭಿ ಪ್ರಾಯ ಅಥವಾ ಸಂಘರ್ಷವನ್ನು ಸೃಷ್ಟಿಸಿದರೆ, ಅವರು ಇಸ್ಲಾಂನ ಶತ್ರುಗಳ ಉದ್ದೇಶಕ್ಕೆ ನೆರವಾದಂತೆ ಎಂದು ಎಚ್ಚರಿಸಿದ್ದಾರೆ.

ಅಮೇರಿಕಾ ಮತ್ತು ಇಸ್ರೇಲ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಈ ಪ್ರದೇಶದ (ಪಶ್ಚಿಮ ಏಷ್ಯಾ) ದೇಶಗಳ ಆಡಳಿತಗಾರರು/ಮುಖ್ಯಸ್ಥರು ತಮ್ಮ ನಿಜವಾದ ಶತ್ರುವನ್ನು ಗುರುತಿಸಬೇಕು. ಅವರ ಸಂಚನ್ನು ಅರ್ಥಮಾಡಿಕೊಂಡು ಎದುರಿಸಬೇಕೆಂದು ಕರೆ ನೀಡಿದ್ದಾರೆ.

ಇರಾನ್‌ನ ಅಧಿಕಾರಿಗಳು ಮತ್ತು ನಾಗರಿಕರು ಆಂತರಿಕ ಭಿನ್ನಾಭಿಪ್ರಾಯಗಳನ್ನು ಮರೆತು ಅಮೇರಿಕಾ ಹಾಗೂ ಇಸ್ರೇಲ್ ವಿರುದ್ಧ ಒಂದಾಗಬೇಕೆಂದು ಅವರು ಮನವಿ ಮಾಡಿದ್ದಾರೆ. ಸಾಮಾಜಿಕ ಐಕ್ಯತೆಗೆ ಧಕ್ಕೆ ತರುವ ಯಾವುದೇ ಕೆಲಸವನ್ನು ಮಾಡ ಬಾರದು ಎಂದು ಕಟ್ಟುನಿಟ್ಟಾಗಿ ಆದೇಶಿಸಿದ್ದಾರೆ.

ಯುದ್ಧದ ಸಮಯದಲ್ಲಿ, ಇರಾನ್ ಸೌದಿ ಅರೇಬಿಯಾ, ಯುಎಇ, ಜೋರ್ಡಾನ್, ಕುವೈತ್, ಕತಾರ್ ಮತ್ತು ಬಹ್ರೇನ್ ಸೇರಿ ಮಧ್ಯಪ್ರಾಚ್ಯದಾದ್ಯಂತ ಇರುವ ಅಮೇರಿಕಾದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ದಾಳಿ ನಡೆಸಿತ್ತು. ಆದರಿಂದಾಗಿ ಈ ರಾಷ್ಟ್ರಗಳೊಂದಿಗಿನ ಇರಾನ್ ಸಂಬಂಧ ಹದಗೆಟ್ಟಿದೆ.

## ಸರ್ಕಾರದ ಕ್ರಮಗಳ ನಡುವೆಯೂ ಸಕ್ಕರೆ ಬೆಲೆ ಏರಿಕೆ ಮುಂದುವರಿಕೆ

• ಪ್ರಜೋದಯ ವರದಿ

**ನವದೆಹಲಿ:** ಬೆಲೆ ಏರಿಕೆ ನಿಯಂತ್ರಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದರೂ, ದೇಶದ ಬಹುತೇಕ ಚಿಲ್ಲರೆ ಮಾರುಕಟ್ಟೆಗಳಲ್ಲಿ ಸಕ್ಕರೆ ದರ ಪ್ರತಿ ಕೆಜಿಗೆ 60ಕ್ಕಿಂತ ಹೆಚ್ಚಾಗಿಯೇ ಉಳಿದಿದೆ.

ಕೇಂದ್ರ ಗ್ರಾಹಕ ವ್ಯವಹಾರ ಸಚಿವಾಲಯದ ಮಾಹಿತಿ ಪ್ರಕಾರ, ದೇಶದ ಚಿಲ್ಲರೆ ಮಾರುಕಟ್ಟೆಗಳಲ್ಲಿ ಕೆ.ಜಿ. ಸಕ್ಕರೆ ಬೆಲೆ ಭಾನುವಾರ ಸರಾಸರಿ 64.24 ಇದೆ. ಇದು ಒಂದು ವಾರದ ಹಿಂದೆ 63.12ರಷ್ಟಿತ್ತು. ಅಂದರೆ, ಶೇ.1.77 ರಷ್ಟು ಹೆಚ್ಚಳವಾಗಿದೆ. ಕಳೆದ ತಿಂಗಳಿಗೆ ಹೋಲಿಸಿದರೆ ಸಕ್ಕರೆ ದರ ಶೇ.30ರಷ್ಟು ಹಾಗೂ ಹಿಂದಿನ ವರ್ಷದಕ್ಕೆ ಹೋಲಿಸಿದರೆ ಶೇ.38.63ರಷ್ಟು ಹೆಚ್ಚಳವಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಇಂದು ಗರಿಷ್ಠ ಬೆಲೆ ಕೆ.ಜಿಗೆ 74 ಇದೆ. ಒಂದು ಕೆ.ಜಿ. ಸಕ್ಕರೆಗೆ ದೆಹಲಿಯಲ್ಲಿ 62, ಮುಂಬೈನಲ್ಲಿ 66 ಮತ್ತು ಚೆನ್ನೈನಲ್ಲಿ 63ರಂತೆ ಮಾರಾಟವಾಗಿದೆ. ಸಗಟು ಮಾರುಕಟ್ಟೆಯಲ್ಲಿ ಕೆ.ಜಿಗೆ 59.73 ಇದೆ. ಕಳೆದ ತಿಂಗಳಿಗೆ ಹೋಲಿಸಿದರೆ ಶೇ.31ರಷ್ಟು ಹೆಚ್ಚಳವಾಗಿದೆ ಎಂದು ಸಚಿವಾಲಯ ತಿಳಿಸಿದೆ.

## ಸೌಹಾರ್ದತೆಯ ಸಂಕೇತ ರಕ್ಷಾ ಬಂಧನ



• ಪ್ರಜೋದಯ ವರದಿ

**ಬೇಲೂರು:** ರಕ್ಷಾ ಬಂಧನವು ಅಣ್ಣ-ತಂಗಿಯರ ಬಾಂಧವ್ಯ ಬೆಸೆಯುವ ಜೊತೆಗೆ ಸಮಾಜದಲ್ಲಿ ಸಹೋದರತ್ವ, ಪ್ರೀತಿ, ಸೌಹಾರ್ದತೆ ಹಾಗು ಪರಸ್ಪರ ಗೌರವ ಭಾವವನ್ನು ಬೆಳೆಸುತ್ತದೆಂದು ಲಯನ್ಸ್ ಕ್ಲಬ್ ತಾಲ್ಲೂಕು ಅಧ್ಯಕ್ಷ ಮುಖ್ತಿಯಾರ್ ಅಹಮದ್ ಅವರು ಹೇಳಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಹಾಗು ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ರಕ್ಷೆ ಕಟ್ಟುವ ಮೂಲಕ ರಕ್ಷಾ ಬಂಧನ ಆಚರಿಸಿದರು.

ಸಾರ್ವಜನಿಕರೊಂದಿಗೆ ಬೆರೆತು ರಕ್ಷಾ ಬಂಧನ ಆಚರಿಸುವ ಮೂಲಕ ಹಬ್ಬದ ಸಂದೇಶವನ್ನು ಸಮಾಜದ ಎಲ್ಲಾ ವರ್ಗಗಳಿಗೂತಲುಪಿಸುವಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಪೂವಯ್ಯ ಅವರು ಮಾತನಾಡಿ, ರಕ್ಷಣೆ ಮತ್ತು ಬಂಧನದ ಸಂಕೇತವಾಗಿರುವ ರಕ್ಷಾ ಬಂಧನ ದೇಶದ ವಿಶಿಷ್ಟ ಹಬ್ಬ. ಈ ಆಚರಣೆಯ ಮೂಲಕ ಸಹೋದರ -ಸಹೋದರಿಯರ ನಡುವಿನ ಆತ್ಮೀಯ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಬೇಕು. ರಕ್ಷಾ ಬಂಧನ ವನ್ನು ವಿಭಿನ್ನವಾಗಿ ಆಚರಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಹಾಗು ನಮ್ಮ ಸಂಸ್ಕೃತಿಯಾಗಿ ಬೆಳೆಯುವಂತೆ ಮಾಡುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ಸಮಾಜದ ಏಳಿಗೆಗಾಗಿ ಇಂತಹ ಸೌಹಾರ್ದಯುತ ಕಾರ್ಯಕ್ರಮ ಎಲ್ಲೆಡೆ ನಡೆಯಬೇಕು. ಮುಸ್ಲಿಂ ಸಮುದಾಯದ ಸಹೋದರಿಯೊಬ್ಬರು ಸಂತೋಷದಿಂದ ರಾಖಿ ಕಟ್ಟಿದ್ದು ಕಾರ್ಯಕ್ರಮದ ಸಾರ್ಥಕತೆಗೆ ಸಾಕ್ಷಿಯಾಗಿದೆ ಎಂದರು.

ಲಯನ್ಸ್ ಕ್ಲಬ್‌ನ ಡಾ. ಚಂದ್ರಮೌಳಿ, ಹೆಬ್ಬಾಳು ಹಾಲಪ್ಪ, ಸುರೇಶ್, ಅಬ್ದುಲ್ ಲತೀಫ್, ಹೇಮಂತ್, ಸಂತೋಷ್ ರಾವ್, ಕುಮಾರ್ ಮತ್ತಿತರರಿದ್ದರು.

## ಹಾಸನ ಸಾಮ್ರಾಟ್ ಗಣಪತಿ ಮೂರ್ತಿ ಆಗಮನ

• ಪ್ರಜೋದಯ ವರದಿ

**ಹಾಸನ:** ಗೌರಿ ಗಣೇಶ ಹಬ್ಬದ ಹಿನ್ನಲೆಯಲ್ಲಿ ಭಾನುವಾರ ನಗರಕ್ಕೆ ಹಾಸನ ಸಾಮ್ರಾಟ್ ಗಣೇಶ ಮೂರ್ತಿ ಆಗಮನವಾಯಿತು.

ನಗರದ ಉದಯಗಿರಿ-ಕುವೆಂಪು ನಗರದಲ್ಲಿ ಪ್ರತಿಷ್ಠಾಪಿಸುವ ಗಣಪತಿ ಇದಾಗಿದ್ದು, 23 ಅಡಿ ಎತ್ತರ ಹೊಂದಿದೆ. ಹೈದರಾಬಾದ್‌ನಿಂದ ಲಾರಿಯಲ್ಲಿ ಕರೆತಂದ ಗಣಪತಿ ಮೂರ್ತಿಗೆ ರಾಷ್ಟ್ರೀಯ ಹೆದ್ದಾರಿ 75ರ ಕೆಂಚಟ್ಟಹಳ್ಳಿಯಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು.

ಬಡಾವಣೆಯ ನಿವಾಸಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಕೆಂಚಟ್ಟಹಳ್ಳಿಯಿಂದ ಡೇರಿ ವೃತ್ತ ಮಾರ್ಗವಾಗಿ ಮೆರವಣಿಗೆಯಲ್ಲಿ ಕರೆತರಲಾಯಿತು. ಶಾಸಕ ಹೆಚ್.ಪಿ. ಸ್ವರೂಪ್, ನಗರ ಸಭೆ ಮಾಜಿ ಸದಸ್ಯ ವಾಸುದೇವ್ ಮತ್ತಿತರರಿದ್ದರು. ಹಾಸನ ಸಾಮ್ರಾಟ್ ಗಣಪತಿಯನ್ನು ಕಳೆದ ನಾಲ್ಕು ವರ್ಷಗಳಿಂದ ಪ್ರತಿಷ್ಠಾಪಿಸಲಾಗುತ್ತಿದೆ.





**ಹಾಸನ: ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಭಾನುವಾರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸೈಕಲ್ ಜಾಥಾಗೆ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಚಾಲನೆ ನೀಡಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಜಿ.ಡಿ.ಆನಂದಮೂರ್ತಿ ಮತ್ತು ವಿವಿಧ ಶಾಲಾ ಕಾಲೇಜು ಮಕ್ಕಳು ಸೈಕ್ಲಿಂಗ್ ಹಾಗು ಸ್ಕೇಟಿಂಗ್‌ನಲ್ಲಿ ಪಾಲ್ಗೊಂಡರು.**

# ಹೊಯ್ಸಳ ರಾಜರಿಂದ ಚಾರುಕೀರ್ತಿ ಬಿರುದು ಪ್ರದಾನ

• ಪ್ರಜೋದಯ ವರದಿ

**ಹಳೇಬೀಡು:** ಹೊಯ್ಸಳರ ಕಾಲದಲ್ಲಿ ಅಡಗೂರು ಬಳಿಯ ರಾಶಿಗುಡ್ಡದಲ್ಲಿ ಸಂಭವಿಸಿದ ಜ್ವಾಲಾಮುಖಿಯನ್ನು ಶ್ರವಣಬೆಳಗೊಳದ ಶುಭಚಂದ್ರ ಮುನಿ ಮಹಾರಾಜರು ಆನೆಯ ಮೇಲೆ ಕೂಷ್ಮಾಂಡಿನಿ ಮಾತೆಯನ್ನು ಕರೆತಂದು ವಿವಿಧ ಪೂಜಾ ವಿಧಾನ ನಡೆಸಿ ಶಮನ ಗೊಳಿಸಿದರು. ಆದ್ದರಿಂದ ಹೊಯ್ಸಳ ರಾಜರು ಸ್ವಾಮೀಜಿಗೆ ಚಾರುಕೀರ್ತಿ ಎಂಬ ಬಿರುದು ನೀಡಿದರೆಂದು ಶ್ರವಣಬೆಳಗೊಳ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಹೇಳಿದರು.

ಬೇಲೂರು ತಾಲ್ಲೂಕು ಅಡಗೂರಿನಲ್ಲಿ ಭಾನುವಾರ ನಡೆದ ಮಾನಸ್ತಂಭ ಮಂಟಪದಲ್ಲಿ ಚತುರ್ಮುಖ ಜಿನಬಿಂಬ ಪ್ರತಿಷ್ಠಾಪನೆ ಮತ್ತು ಪುಣ್ಯ ಪ್ರಭಾವಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಶ್ರವಣಬೆಳಗೊಳ ಹಾಗು ಅಡಗೂರು ಗ್ರಾಮಕ್ಕೆ ಐತಿಹಾಸಿಕ ಮಹತ್ವದ ಸಂಬಂಧವಿದೆ. ಹೀಗಾಗಿ ಅಡಗೂರು ಚಾರುಕೀರ್ತಿ ಪೀಠ ಸ್ಥಾಪನೆಗೆ ಕಾರಣವಾಗಿದೆ ಎಂದರು.

ಅಡಗೂರಿನವರಾದ ದೇವಪ್ಪ ಮುನಿಗಳಿಗೆ ಶ್ರವಣಬೆಳಗೊಳದಲ್ಲಿ ಮುನಿ ದೀಕ್ಷೆ ನಡೆದಿದೆ ಎಂಬುದಕ್ಕೆ ದಾಖಲೆಗಳಿವೆ. ಅಡಗೂರು ಜಿನ ಮಂದಿರ ಆವರಣದಲ್ಲಿರುವ ದೇವಪ್ಪ ಸ್ವಾಮಿ ಅವರ ಪಾದಗಳಿಗೆ ಶರವಣಬೆಳಗೊಳ ಮಠದಿಂದ





ಶಿಲಾಮಯ ಮಂಟಪ ನಿರ್ಮಿಸಿ ಕೊಡುತ್ತೇವೆ. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಜೈನ ಧರ್ಮ ಪ್ರಬಲವಾಗಿತ್ತು. ಹಾಸನ ಜಿಲ್ಲೆ ಒಂದರಲ್ಲಿಯೇ ಸಾವಿರಾರು ಜಿನ ಮಂದಿರಗಳು ನೆಲಸಮಗೊಂಡಿವೆ. ಈಗ ಜೈನ ಯುವಕರು ಧರ್ಮ ರಕ್ಷಣೆಗೆ ಮುಂದಾಗಬೇಕು. ಜೈನ ಕ್ಷೇತ್ರ, ಜಿನ ಮಂದಿರ, ಜಿನ ಮೂರ್ತಿ ಹಾಗು ಜೈನ ಶಾಸನಗಳನ್ನು ರಕ್ಷಣೆ ಮಾಡಬೇಕು. ಅಡಗೂರಿನ ಜೈನ ಸಮಾಜದಲ್ಲಿ ಹಿರಿಯರು, ಕಿರಿಯರು, ಮಹಿಳೆ, ಪುರುಷರೆನ್ನದೆ ಎಲ್ಲರೂ ಒಗ್ಗಟ್ಟಿನಿಂದ ಧರ್ಮ ಜಾಗೃತಿಯಲ್ಲಿ ಪಾಲ್ಗೊಂಡಿರುವುದು ಶ್ಲಾಘನೀಯ ಎಂದರು.

ಜೈನಮುನಿ ವೀರಸಾಗರ ಮುನಿಮಹಾರಾಜ್ ಮಾತನಾಡಿ, ಜಿನಮೂರ್ತಿ ಪ್ರತಿಷ್ಠಾಪನೆ ಹಾಗು ಅಭಿಷೇಕ ಮಾಡುವುದರಿಂದ ಪುಣ್ಯಪ್ರಭಾವನೆ ಆಗುತ್ತದೆ. ಜಿನಮೂರ್ತಿ ಪ್ರತಿಷ್ಠಾಪನೆ ಮಾಡಿದವರಿಗೆ ಮಾತ್ರವಲ್ಲದೆ, ಜಿನಮಂದಿರ ಹಾಗು ಬಿಂಬಗಳನ್ನು ದಾನ ಮಾಡಿದವರಿಗೂ ಪುಣ್ಯ ಪ್ರಾಪ್ತಿಯಾಗುತ್ತದೆಂದರು.

ಪ್ರಮುಖರಾದ ಎ.ಎಸ್.ನಾಗೇಂದ್ರ ಕುಮಾರ್, ಶಾಮಲ ಜಿನರಾಜಯ್ಯ, ಡಾ.ನಿರಜಾ ನಾಗೇಂದ್ರ ಕುಮಾರ್, ಶಶಿಕುಮಾರ್, ಧವನ್ ಜೈನ್, ಎ.ಬಿ.ಕಾಂತರಾಜು, ಪುಷ್ಪ ರತ್ನರಾಜು, ಸುಧಾ ವಿಜಯ್ ಕುಮಾರ್, ಪ್ರಾಧ್ಯಾಪಕ ಎ.ಪಿ.ಪವನ್ ಕುಮಾರ್, ನಿಶ್ಚಲ ಸನತ್ ಕುಮಾರ್ ಪಾಲ್ಗೊಂಡಿದ್ದರು.

ಮುನಿಶ್ರೀ ವೀರಸಾಗರ ಮಹಾರಾಜರು ಹಾಗು ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ ಅವರ ಸಮ್ಮುಖದಲ್ಲಿ ಪ್ರತಿಷ್ಠಾಪನಾ ಮಹೋತ್ಸವ ನಡೆಯಿತು. ಊರಿನ ಜೈನ ಯುವಕರು ಚತುರ್ಮುಖ ಜಿನಬಿಂಬ ಪ್ರತಿಷ್ಠಾಪಿಸಿದರು.

ಚತುರ್ಮುಖ ಜಿನ ಬಿಂಬಗಳಿಗೆ 108 ಕಳಸದ ಜಲ, ಗಂಧ, ಎಳನೀರು, ಕಷಾಯ, ಕಬ್ಬಿನ ಹಾಲು, ಅರಿಶಿಣ, ಚಂದನ, ಕಲ್ಕಚೂರ್ಣ ಹಾಗು ವಿವಿಧ ಪುಷ್ಪಗಳಿಂದ ಜಿನ ಬಿಂಬಗಳಿಗೆ ಅಭಿಷೇಕ ನೆರವೇರಿಸಲಾಯಿತು. ಚತುಷ್ಕೋನ ಹಾಗು ಪೂರ್ಣ ಕಳಸದ ಅಭಿಷೇಕ ನೆರವೇರಿಸಿದ ನಂತರ ಜಗತ್ತಿನ ಸಕಲ ಜೀವಿಗಳಿಗೆ ಶಾಂತಿ, ನೆಮ್ಮದಿ ಮುಕ್ತಿ ದೊರಕಲಿ ಎಂದು ಪ್ರಾರ್ಥಿಸಿ ಚತುರ್ಮುಖ ಜಿನ ಬಿಂಬಗಳಿಗೆ ಶಾಂತಿಧಾರೆ ನೆರವೇರಿಸಲಾಯಿತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK